ಒಲುಮೆ

ತೀ. ನಂ. ಶ್ರೀಕಂಠಯ್ಯ



ಪ್ರಕಾಶಕರು

ಶಾರದಾ ಮಂದಿರ

೫೨೮ ಕೃಷ್ಣರಾಜವನಂ, ಮೈಸೂರು

ಈ ಲೇಖಕರ ಇತರ ಗ್ರಂಥಗಳು

ಪಂಪ

ಕನ್ನಡ ಮಧ್ಯಮ ವ್ಯಾಕರಣ

ರಾಕ್ಷಸನ ಮುದ್ರಿಕೆ

ಕಾವ್ಯಸಮೀಕ್ಷೆ

ಭಾರತೀಯ ಕಾವ್ಯಮೀಮಾಂಸೆ

ಸಂಪಾದಿತ

ಹೆಣ್ಣುಮಕ್ಕಳ ಪದಗಳು

ನಂಬಿಯಣ್ಣನ ರಗಳೆ

ಗದಾಯುದ್ಧಸಂಗ್ರಹ

ಅಚ್ಚಿನಲ್ಲಿ

ಬಿಡಿಮುತ್ತು

ತಡವಾಯ್ತು ಕಾಣಿಕೆಯ ಕಳಿಸಲ್ಕೆ ಓ ಮಿತ್ರ ಕ್ಷಮಿಸು,
ನಿಮ್ಮೊಂದು ನೆರವಿಂದ ನನಸಾಯ್ತು ಈ ನಮ್ಮ ಕನಸು.

ಶ್ರೀಮಾನ್ ಎಂ. ವಿ. ಸೀತಾರಾಮಯ್ಯನವರಿಗೆ
ವಿಶ್ವಾಸ ಕೃತಜ್ಞತೆಗಳೊಡನೆ
ಎಚ್. ಎಂ. ಶಂಕರನಾರಾಯಣರಾವ್
೧೪.೧೧.೫೨

ಶ್ರೀ ಎಂ. ವಿ. ಸೀತಾರಾಮಯ್ಯನವರ ಗ್ರಂಥಾಲಯ

ಕನ್ನಡ ಕವಿ ಕಾವ್ಯಮಾಲೆ_೧೦

ಒಲುಮೆ

ತೀ. ನಂ. ಶ್ರೀಕಂಠಯ್ಯ

ಪ್ರಕಾಶಕರು :

ಶಾರದಾ ಮಂದಿರ

೫೭೭ ಕೃಷ್ಣರಾಜವನಂ, ಮೈಸೂರು

ಮೊದಲನೆಯ ಮುದ್ರಣ ೧೯೪೨
ತಿದ್ದಿ ಬೆಳಸಿದ ಎರಡನೆಯ ಮುದ್ರಣ ೧೯೫೪

ಬೆಲೆ : ಸಾಧಾರಣ ಪ್ರತಿ ೧-೮-೦
ಉತ್ತಮ ಪ್ರತಿ ೨-೮-೦

ಮುದ್ರಕರು :
ಜಿ. ಎಚ್. ರಾಮರಾವ್, ಬಿ. ಎಸ್‌ಸಿ.
ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್
ಮೈಸೂರು

—ಗೆ

ನನ್ನೆದೆಯೊಳಡಗಿದ್ದ ಕಿಡಿಯದನು ಮೊದಲು
ನಿನ್ನೊಲುಮೆಯೆಲರು ತಾಸುರುಹಿ ಹರಹಿರಲು,
ಮನ್ನಿಸಿದರಲಿ ಕುಂದನೆನಲೇಕೆ ಬೇರೆ ?—
ನಿನ್ನ ಕೃತಿಯನು ನೀನೆ ಕಡೆಗಣಿಸಲಾರೆ !

ಅರಿಕೆ

ಪ್ರೇಮಗೀತಗಳನ್ನು ಬರೆಯುವುದೂ, ಬರೆದ ಮೇಲೆ ಬೆಳಕಿಗೆ ತರುವುದೂ—ಎರಡೂ ಸಾಹಸಕಾರ್ಯಗಳೇ. ಈ ಬಗೆಯ ಕವನಗಳಲ್ಲಿ ಔಚಿತ್ಯದ ಹದ ಎಲ್ಲಿ ಮೀರುತ್ತದೆ, ರಸ ಎಲ್ಲಿ ಹಸಗೆಟ್ಟು ಹಾಸ್ಯಕರವಾಗುತ್ತದೆ ಎಂದು ಅರಿಯುವುದು ಲೇಖಕನಿಗಂತೂ ಬಲು ಕಷ್ಟ. ಆದರೂ ಭಾವವು ಪ್ರೇರಿಸಿದಾಗ ಈ ವಿಚಾರಕ್ಕೆ ಅಷ್ಟು ಮನಸ್ಸು ಕೊಡದೆ, ನಾಲ್ಕು ಚರಣಗಳನ್ನು ಆಗಾಗ ಕೂಡಿಸಿದ್ದಾಯಿತು. ಅವುಗಳನ್ನು ಪ್ರಕಟಿಸುವುದಕ್ಕೆ ಮಾತ್ರ ನನ್ನ ಆಪ್ತಮಿತ್ರರು ಕೆಲವರ ಒಪ್ಪಿಗೆಯೂ ಉತ್ತೇಜನವೂ ದೊರೆಯದಿದ್ದರೆ ಧೈರ್ಯ ಬರುತ್ತಿರಲಿಲ್ಲ. ಈಗ ಕೂಡ, ಈ ಚಿಕ್ಕ ಗೀತಾವಳಿಯನ್ನು ಸ್ವಲ್ಪ ಅಳುಕಿನಿಂದಲೇ ಸಹೃದಯರ ಮುಂದೆ ಇರಿಸಿದ್ದೇನೆ.

ಈ ಕವನಗಳು ಒಂದು ಕಾಲದಲ್ಲಿ, ಒಂದು ಮನಸ್ಸಿನಲ್ಲಿ ಬರೆದವುಗಳಲ್ಲ; ಕಡೆಗೆ ಒಂದೇ ದೃಷ್ಟಿಯಿಂದ ಕೂಡ ಬರೆದವುಗಳಲ್ಲ. ಆದಕಾರಣ ಇವುಗಳನ್ನು ಸಾಧ್ಯವಾದಷ್ಟುಮಟ್ಟಿಗೆ ವಿಷಯಾನುಗುಣವಾಗಿ ಜೋಡಿಸಿದ್ದರೂ ಈ ಸಂಕಲನದಲ್ಲಿ ಒಂದು ಸಾಮರಸ್ಯವು ವಾಚಕರಿಗೆ ತೋರದಿರಬಹುದು; ಅವರೂ ಅದನ್ನು ನಿರೀಕ್ಷೆಮಾಡದೆ, ಇವೆಲ್ಲವನ್ನೂ ಬಿಡಿ ಕವನಗಳೆಂದೇ ಭಾವಿಸಬೇಕಾಗಿ ಕೋರಿಕೆ.

ಇಲ್ಲಿ ಕೊಟ್ಟಿರುವ ಅನುವಾದಗಳನ್ನು ಕುರಿತು ಎರಡು ಮಾತುಗಳು. ಸಂಸ್ಕೃತ ಸಾಹಿತ್ಯದಲ್ಲಿ ಶೃಂಗಾರರಸವು ಗಾಂಭೀರ್ಯವನ್ನು ಸಾಕಾದಷ್ಟು ಕಾಪಾಡಿಕೊಂಡಿಲ್ಲವೆಂದು ಕೆಲವರು ಆಡಿಕೊಳ್ಳುವುದುಂಟು. ಆದರೆ ಈಗ ನಾವು ಉಚ್ಚರಿಸಲು ನಾಚುವ ಹಲವು ಮಾತುಗಳಿಗೆ ಸಂಸ್ಕೃತದಲ್ಲಿ ಅಶ್ಲೀಲಧ್ವನಿಯಿಲ್ಲ. ಅಲ್ಲದೆ, ಪ್ರೇಮದ ಹೃದಯವನ್ನು ಶುಚಿಯಾದ ವಾಣಿಯಲ್ಲಿ, ವಿಶ್ವಮನೋಹರವಾದ ರೀತಿಯಲ್ಲಿ ಸಂಸ್ಕೃತ ಕವಿಗಳು ನಿರೂಪಿಸಬಲ್ಲರೆನ್ನುವುದಕ್ಕೆ ಇಲ್ಲಿರುವ ಕೆಲವು ಪದ್ಯಗಳೇ— ನನ್ನ ಅನುವಾದದಲ್ಲಿ ಅವುಗಳ ಮಾಧುರ್ಯಸೌಕುಮಾರ್ಯಗಳು

ಕೊಂಚಮಟ್ಟಿಗಾದರೂ ಉಳಿದಿದ್ದರೆ—ಸಾಕ್ಷಿಯಾಗಿ ನಿಲ್ಲಬಹುದು * ಈ ಬಿಡಿ ಪದ್ಯಗಳಲ್ಲಿ—"ಮುಕ್ತಕ"ಗಳಲ್ಲಿ—ಒಂದೊಂದೂ ಪೂರ್ಣಕಾವ್ಯ. ಅವಕಾಶವು ಇಷ್ಟು ಕಿರಿದಾಗಿದ್ದರೂ ಅದು ಒಂದು ಸಮಗ್ರಭಾವವನ್ನು ಚಿತ್ರಿಸುತ್ತದೆ. ಅದರ ಸವಿಯನ್ನೆಲ್ಲಾ ಆಸ್ವಾದಿಸಬೇಕಾದರೆ, ಕವಿಯ ಕಲ್ಪನೆಯೊಂದಿಗೆ ನಮ್ಮ ಕಲ್ಪನೆಯನ್ನೂ ಹಾರಬಿಟ್ಟು, ಚಿತ್ರದ ಸುತ್ತಲೂ ಒಂದು ಉಚಿತವಾದ ಆವರಣವನ್ನು ರಚಿಸಿಕೊಂಡು, ಅದರ ಪ್ರಭೆಯನ್ನು ಕವಿಯ ಮಾತುಗಳ ಮೇಲೆ ಬೀರಬೇಕು. ಆಗ ನಮಗೆ ಈ "ದಂತದ ಮೇಲಿನ ಚಿತ್ರಗೆಲಸ"ದ ಅಪೂರ್ವಸತ್ತ್ವವು ಮನದಟ್ಟಾಗುತ್ತದೆ; ಅಮರುಕನಂಥ ಕವಿಗೆ ಸಂಸ್ಕೃತ ಸಾಹಿತ್ಯದಲ್ಲಿರುವ ಪ್ರಶಸ್ತಿ ಅರ್ಥವಾಗುತ್ತದೆ.

ಮೇಲಿನ ಮಾತುಗಳೇ 'ಗಾಥಾಸಪ್ತಶತಿ'ಯಿಂದ ಆರಿಸಿಕೊಂಡಿರುವ ಪ್ರಾಕೃತ ಪದ್ಯಗಳಿಗೂ—ಅಷ್ಟೇಕೆ, ಗ್ರೀಕ್ ಭಾಷೆಯಿಂದ ತೆಗೆದುಕೊಂಡಿರುವ ಎರಡು ಪದ್ಯಗಳಿಗೂ ಕೂಡ—ಸಮಯೋಚಿತವಾಗಿ ಅನ್ವಯಿಸುತ್ತವೆ. ಈ ಗ್ರೀಕ್ ಪದ್ಯಗಳ ಪರಿಚಯವು ನನಗೆ ಅವುಗಳ ಇಂಗ್ಲಿಷ್ ರೂಪಾಂತರದಲ್ಲಿ ಮಾತ್ರ ಆಗಿದೆಯೆಂದು ಇಲ್ಲಿ ತಿಳಿಸುವುದು ಆವಶ್ಯಕ.

ಈ ಗ್ರಂಥದ ಪ್ರಕಟನೆಯಲ್ಲಿ ನನಗೆ ನೆರವಾಗಿ ಬೆಂಬಲವಾಗಿ ನಿಂತ ಹಿರಿಯರಿಗೂ ಮಿತ್ರರಿಗೂ ನನ್ನ ಕೃತಜ್ಞತೆಯನ್ನು ತುಂಬ ಸಂತೋಷದಿಂದ ಸಲ್ಲಿಸುತ್ತೇನೆ. ಇಲ್ಲಿ ಬಂದಿರುವ ಕವನಗಳಲ್ಲಿ 'ನಡೆದ ಸಂಗತಿ' ಎಂಬುದು 'ಜಯಕರ್ನಾಟಕ'ದಲ್ಲಿಯೂ, 'ಹಿಡಿದ ವ್ರತ'ವು 'ಸರಸ್ವತಿ'ಯಲ್ಲಿಯೂ ಈ ಮೊದಲೆ ಪ್ರಕಟವಾಗಿದ್ದುವು. ಈ ಕೃಪೆಗಾಗಿ ಅವೆರಡು ಪತ್ರಿಕೆಗಳ ಸಂಪಾದಕರಿಗೆ ನನ್ನ ವಂದನೆಗಳು.

ತೀ. ನಂ. ಶ್ರೀ.

---

* ಎರಡನೆಯ ಮುದ್ರಣದಲ್ಲಿ ಸಂಸ್ಕೃತ ಮುಕ್ತಕಗಳ ಅನುವಾದಗಳನ್ನು ಬಿಡಲಾಗಿದೆ. ಕಾರಣವನ್ನು ಇದರ ಅರಿಕೆಯಲ್ಲಿ ತಿಳಿಸಿದೆ.

ಎರಡನೆಯ ಪರಿಷ್ಕರಣದ ಅರಿಕೆ

‘ಒಲುಮೆ’ ನನ್ನ ಮೊಟ್ಟಮೊದಲ ಗ್ರಂಥ; ಇದರ ಪ್ರಕಟನೆಯ ಭಾರವನ್ನು ಮೈಸೂರು ಪ್ರೋಗ್ರೆಸ್ ಬುಕ್‌ಸ್ಟಾಲಿನ ಒಡೆಯರೂ ನನ್ನ ಮಿತ್ರರೂ ಆಗಿದ್ದ ದಿವಂಗತ ಶ್ರೀ ಎ. ವೆಂಕಟರಾಯರು ವಹಿಸಿಕೊಳ್ಳಲು ಮುಂದೆ ಬಂದು ಇದನ್ನು ಬೆಳಕಿಗೆ ತಂದು ಆಗಲೇ ಇಪ್ಪತ್ತು ವರ್ಷಕ್ಕೆ ಮೀರಿತು. ಪುಸ್ತಕದ ಪ್ರತಿಗಳು ದೊರೆಯದಂತಾಗಿಯೇ ಎಷ್ಟೋ ವರ್ಷವಾಯಿತು. ಕೆಲವು ಮಂದಿ ಮಿತ್ರರೂ ಕಾವ್ಯ ಕುತೂಹಲಿಗಳೂ ಇದನ್ನು ಕುರಿತು ಒಮ್ಮೊಮ್ಮೆ ವಿಚಾರಿಸುತ್ತಿದ್ದರೂ ಮತ್ತೆ ಇದನ್ನು ಮುದ್ರಿಸುವ ಕಡೆಗೆ ನನ್ನ ಮನಸ್ಸು ಅಷ್ಟಾಗಿ ಹರಿದಿರಲಿಲ್ಲ. ನಾಲ್ಕು ವಾರದ ಕೆಳಗೆ ನಾನು ಮೈಸೂರಿಗೆ ಹೋಗಿದ್ದಾಗ, ನನ್ನ ಹಳೆಯ ಶಿಷ್ಯರೂ ಮಿತ್ರರೂ ಉತ್ಸಾಹಶೀಲ ಪ್ರಕಾಶಕರೂ ಆದ ಶ್ರೀಮಾನ್ ಎಚ್. ಎಂ. ಶಂಕರನಾರಾಯಣರಾಯರು ‘ಒಲುಮೆ’ಯ ಮಾತನ್ನು ಎತ್ತಿದರು; ತಮ್ಮ ‘ಕನ್ನಡ ಕವಿ ಕಾವ್ಯಮಾಲೆ’ಯಲ್ಲಿ ಇದನ್ನು ಸೇರಿಸಿಕೊಳ್ಳುವ ಸೂಚನೆಯನ್ನು ಮುಂದಿಟ್ಟರು ; ತಮ್ಮ ವಿಶ್ವಾಸದಿಂದ ನನ್ನ ಸಂಕೋಚವನ್ನು ಗೆದ್ದರು. “ಶಿಷ್ಯಾದಿಚ್ಛೇತ್ ಪರಾಜಯಂ !”

‘ಒಲುಮೆ’ಯ ಮೊದಲ ಮುದ್ರಣದಲ್ಲಿ ಕಾರಣಾಂತರದಿಂದ ಸೇರಿಸದೆ ಬಿಟ್ಟ ಅಥವಾ ಅದರ ಪ್ರಕಟನೆಯ ಕಾಲದಿಂದೀಚೆಗೆ ರಚಿಸಿದ ಕೆಲವು ಕವನಗಳನ್ನು ಇಲ್ಲಿ ಹೊಸದಾಗಿ ಜೊತೆಗೂಡಿಸಿದೆ. ಇವುಗಳಲ್ಲಿ ಬಹುಶಃ ಎಲ್ಲವೂ ‘ಪ್ರಬುದ್ಧ ಕರ್ಣಾಟಕ’, ‘ಜಯಕರ್ನಾಟಕ’, ‘ವಿಚಾರವಾಹಿನಿ’, ‘ರಾಷ್ಟ್ರಬಂಧು’—ಈ ಪತ್ರಿಕೆಗಳಲ್ಲಿ ಆಗಲೇ ಪ್ರಕಾಶಗೊಂಡಿದ್ದವು. ಈ ಸೇರ್ಪಡೆಗೆ ಪ್ರತಿಯಾಗಿ, ಮೊದಲ ಮುದ್ರಣದಲ್ಲಿದ್ದ ‘ಸಂಸ್ಕೃತದಿಂದ’ ಎಂಬ ಭಾಗದ ಅನುವಾದಗಳನ್ನು ಕೈಬಿಡಲಾಗಿದೆ. ಅವುಗಳಲ್ಲಿ ಸರಿಸುಮಾರು ಎಲ್ಲವನ್ನೂ ಪರಿಷ್ಕರಿಸಿ ಮೈಸೂರಿನ ಕಾವ್ಯಾಲಯದಿಂದ ಇಷ್ಟರಲ್ಲೇ ಪ್ರಕಟವಾಗಲಿರುವ ‘ಬಿಡಿಮುತ್ತು’ ಎಂಬ

ನನ್ನ ಸಂಸ್ಕೃತದ ಅನುವಾದಾವಳಿಯಲ್ಲಿ ಸೇರಿಸಿರುವುದರಿಂದ ಇಲ್ಲಿಯೂ ಉಳಿಸಿಕೊಳ್ಳುವುದು ಅನುಚಿತವೆನಿಸಿತು. ಪ್ರಾಕೃತಭಾಷೆಯ 'ಗಾಥಾ ಸಪ್ತಶತಿ'ಯಿಂದ ಹಿಂದೆ ಎಂಟು ಪದ್ಯಗಳನ್ನು ಮಾತ್ರ ಆಯ್ದುಕೊಳ್ಳಲಾಗಿತ್ತು; ಈಗ ಅವು ಹದಿನೆಂಟಾಗಿವೆ.

ಹೊಸಗನ್ನಡದ ಕಾವ್ಯವಾಹಿನಿಯಲ್ಲಿ ಪ್ರೇಮಗೀತಗಳಿಗೇ ಮೀಸಲಾಗಿ ಹೊರಬಿದ್ದ ಮೊದಮೊದಲಿನ ಪುಸ್ತಕಗಳಲ್ಲಿ 'ಒಲುಮೆ' ಒಂದೆಂದು ನನ್ನ ಮಿತ್ರರಲ್ಲಿ ಕೆಲವರು ಜ್ಞಾಪಿಸುವುದುಂಟು. ಇದು ನಿಜವಾದ ಪಕ್ಷದಲ್ಲಿ ಇದಿಷ್ಟೇ ಈ ಕೃತಿಯ ವಿಶೇಷವೆಂದು ಈ ಕಾಲಾಂತರದಲ್ಲಿ ನನಗೆ ತೋರುತ್ತಿದೆ. ಅಂದಿನ ಪದ್ಯಗಳನ್ನು ಮತ್ತೊಮ್ಮೆ ಓದಿದಾಗ ಎಷ್ಟೋ ಕಡೆ ಮಾತು ಸಪ್ಪೆಯೆಂದೂ ಭಾವವು ಸಾಮಾನ್ಯವೆಂದೂ ನನಗೇ ಅನ್ನಿಸಿತು. ಈಗ ನಾನು ಅಲ್ಲಲ್ಲಿ ಕೈಯಾಡಿಸಿದ್ದರೂ ಎಲ್ಲ ಶೈಥಿಲ್ಯವನ್ನೂ ದೂರಮಾಡಲು ಶಕ್ಯವಾಗಲಿಲ್ಲ; ಅಂಥ ಉದ್ದೇಶವೂ ನನಗಿರಲಿಲ್ಲ. ಅಂದಿನ ಯಾವೊಂದು ಕವನವನ್ನು ಬಿಡುವುದಕ್ಕಾದರೂ ಮನಸ್ಸು ಬರಲಿಲ್ಲ. ರಸದ ದೃಷ್ಟಿಯಿಂದ ಅಲ್ಲದಿದ್ದರೆ ಕಾಲದ ದೃಷ್ಟಿಯಿಂದಾದರೂ ಈ ಪದ್ಯಗಳನ್ನು ಅವಲೋಕಿಸುವ ಇಚ್ಛೆ ಕಾವ್ಯಪ್ರೇಮಿಗಳಿಗೆ ಹುಟ್ಟಿದರೆ ಈ ಪ್ರಕಾಶನ ಸಾರ್ಥಕವಾಗಬಹುದೆಂದು ಭಾವಿಸುತ್ತೇನೆ.

ಧಾರವಾಡ
೪-೯-೧೯೫೩

ತೀ. ನಂ. ಶ್ರೀ.

ಪ್ರಕಾಶಕರ ಎರಡು ನುಡಿ

ಹೊಸಗನ್ನಡ ಸಾಹಿತ್ಯದಲ್ಲಿ ಪ್ರೇಮಗೀತಗಳ ಹೊಸಯುಗವನ್ನೇ ಮೊಟ್ಟಮೊದಲು ಸಾರಿತಂದ ಈ ಉತ್ಕೃಷ್ಟ ಕೃತಿಯನ್ನು ನಮ್ಮ ಮಾಲೆಯಲ್ಲಿ ಸೇರಿಸಬೇಕೆಂದಿರುವ ಇಷ್ಟವನ್ನು ನಾನು ವ್ಯಕ್ತಪಡಿಸಿದಾಗ ನನ್ನ ಮೇಲಣ ಅಮಿತ ವಿಶ್ವಾಸದಿಂದ ಈ ಕೃತಿಯು ಪ್ರಕಟನೆಗೆ ತಮ್ಮ ಒಪ್ಪಿಗೆಯನ್ನಿತ್ತು ನನ್ನನ್ನು ಹರಸಿದ ನನ್ನ ವಿದ್ಯಾಗುರುಗಳೂ ಶಿಷ್ಯವಾತ್ಸಲ್ಯ ಪ್ರಪೂರ್ಣರೂ ಆದ ಪ್ರೊ. ತೀ. ನಂ. ಶ್ರೀಕಂಠಯ್ಯನವರನ್ನು ಭಕ್ತಿಭಾವದಿಂದ ವಂದಿಸುತ್ತೇನೆ. ನನ್ನ ಕೋರಿಕೆಯನ್ನು ಮನ್ನಿಸಿ ಅಲ್ಪಕಾಲದಲ್ಲಿ ಈ ಕೃತಿಯನ್ನು ಸುಂದರವಾಗಿ ಮುದ್ರಿಸಿಕೊಟ್ಟ ಪ್ರಿಯಮಿತ್ರ ಶ್ರೀ ಜಿ. ಎಚ್. ರಾಮರಾಯರಿಗೆ ನಾನು ತುಂಬ ಕೃತಜ್ಞನಾಗಿದ್ದೇನೆ.

ಶಾರದಾಮಂದಿರ
ಮೈಸೂರು
೧೫–೧೦–೫೪

ಎಚ್. ಎಂ. ಶಂಕರನಾರಾಯಣರಾವ್

ಕವನಗಳ ಕ್ರಮ

ಅನುವಾದ

ಒಲುಮೆ

ಏಕೆ

ನಿನ್ನ ಕಾಣುತಲೆ ನನ್ನೆದೆಯೇಕೆ ಹಾರುವುದು,
ಹೊಸ ಬಗೆಯ ಸಂತೋಷವೇಕೊಗೆವುದು ?
ನಿನ್ನ ಸಂಗದ ಸೌಖ್ಯವೇಕೆ ಮನಸನು ಕುಣಿಸಿ
ಮಿಕ್ಕೆಲ್ಲ ಚಿಂತೆಯನು ಮರೆಯಿಸುವುದು ?
ನಿನ್ನ ಮೈ ಸೋಕಿದರೆ ಮಿಂಚು ಹರಿದಂತೇಕೆ
ನನ್ನ ಮೈ ಜುಮ್ಮೆಂದು ಕಂಪಿಸುವುದು ?
ನಿನ್ನನಗಲಲು ಬಾಳಿನೊಳಗೇಕೆ ಸವಿಯಿರದು,
ನನ್ನನೇತಕೆ ದುಗುಡ ಸೆರೆಗೊಳುವುದು ?

ನಿನ್ನ ಚಿಂತೆಯಲಿಂತು ನಾನೇಕೆ ಮುಳುಗಿರುವೆನು,
ನಿನ್ನ ಮೂರ್ತಿಯನೆದೆಯ ಪೀಠದಲಿ ನಿಲಿಸಿರುವೆನು ?
ನಿನ್ನ ಮೋಹದ ಮಾಯೆಯೇಕೆ ಹಗಲಿರುಳೆನ್ನದೆ
ನನ್ನ ಜೀವನಪಥವನೆಡೆಬಿಡದೆ ಕವಿದಿರುವುದು ?

ಪ್ರಥಮದರ್ಶನ

ತಳೆದ ಮುಗಿಲ ಮುಸುಕಿನಲ್ಲಿ
ದಿನವು ಕೊರಗುತಿದ್ದಿತು.
ಮಳೆಯು ಮನಸಿನುಲ್ಲಸವನು
ಜಿನುಗಿ ತೊಳೆಯುತಿದ್ದಿತು.

ಹೊರಗೆ, ಕಾಂತಿ ಹಗಲಿಗಿಲ್ಲ ;
ಬರಿಯ ಮಂಕು ಕವಿದಿದೆ.
ಹರಿವ ಮಿಂಚು, ಸಿಡಿಲು ಇಲ್ಲ ;
ಹನಿವುದೊಂದೆ ತುಂತುರು.

ಒಳಗೆ, ಎಲ್ಲರೊಡನೆ ಕುಳಿತು
ಏನೊ ನೆನೆಯುತಿದ್ದೆನು.
ಸುಳಿಯಿತಾಗ ಮಿಂಚದೊಂದು
ಸೆಳೆದು ನನ್ನ ಕಣ್ಣನು.

" ಬಾರೆ ತಾಯಿ, ಮಾವನವರಿ-
ಗೆರಗು " ಎಂದ ಮಾತಿಗೆ—
ತೋರಿ, ಮೆಲ್ಲನೊಳಗಿನಿಂದ
ನಡೆದು ಬಂದ ಮಿಂಚದು.

ಅವಳ ಮುಗುಳುನಗೆಯ ಹೊನಲು
ಮನೆಯನೆಲ್ಲ ತುಂಬಿತು.
ಅವಳ ಕಣ್ಣ ಬೆಳಕಿನಲ್ಲಿ
ಹಗಲ ಮಂಕು ಚೆದರಿತು.

ಅಂದು ತನಕ ಬಂಧಿಸಿದ್ದ
ನನ್ನ ಮನದ ಬಾಗಿಲು
ಒಂದೆ ಸಲಕೆ ತೆರೆದುಹೋಯ್ತು—
ಅವಳು ಒಳಗೆ ಹೊಕ್ಕಳು.

ಎಷ್ಟು ಮಂದಿ ಕನ್ಯೆಯರನು
ಹಿಂದೆ ನೋಡಲಿಲ್ಲವು !
ಇಷ್ಟು ಬೇಗನಿಲ್ಲಿ ಮನಸು
ಹಿತವನೆಂತು ಪಡೆಯಿತು ?

ಚೆಲುವೆಯೆಂದು ನುಡಿಯಲಾರೆ ;
ಚದುರೆಯೇನೊ ತಿಳಿಯದು.
ಒಲಿದು ನನ್ನ ಹೃದಯವೆಂತು
"ಇವಳೆ ಸಾಕು" ಎಂದಿತು !

ಸಂಬಂಧ

ನೋಡಿರುವೆ ನಾನೆಷ್ಟೊ ಜನರನೀ ಧರಣಿಯಲಿ,
ಮುಸುಕಲಿಲ್ಲವು ನನ್ನನವರ ಮಾಯೆ.
ನಂಟರಿಷ್ಟರೊಳೆನ್ನ ಮನದೊಲವು ನೆಲಸಿಯೂ
ಈ ಬಗೆಯ ಹೊಸ ರಾಗವುದಿಸಲಿಲ್ಲ.
ಇಳೆಯ ಸುಂದರಿಯರಾ ಕಡೆಗಣ್ಣ ನೋಟಗಳ
ಸರಳೆನ್ನ ಹೃದಯವನು ಸೋಕಲಿಲ್ಲ.
ನೀನು ಮಾತ್ರವದೆಂತು ನನ್ನ ಚೈತನ್ಯವನು
ಸೆರೆಗೈದು ಪ್ರೇಮದಲಿ ಬಂಧಿಸಿರುವೆ ?

ನಿನ್ನನರಿತಿರಲಿಲ್ಲ, ಕಂಡುಕೇಳಿರಲಿಲ್ಲ,
ಬಂಧುಬಳಗವು ಮೊದಲೆ ನೀನಲ್ಲವು.
ಬಾಲ್ಯದಲಿ ನಿನ್ನೊಡನೆ ಕಲೆತು ವಿಹರಿಸಲಿಲ್ಲ;
ಮತ್ತೆ ಚಿರಪರಿಚಯವು ನಮಗಿಲ್ಲವು.
ನಿನಗೆ ನಾನುಪಕಾರವೆಸಗಲಿಲ್ಲವು, ನೀನು
ನನ್ನ ಕಷ್ಟದ ದಿನದ ಬಗೆಯನರಿಯೆ.
ಸಂಬಂಧವಿಂತಿರಲು ನಮ್ಮನಿಬ್ಬರನೆಂತು
ಹೊಂದಿಸಿತು ಪ್ರೇಮದಲಿ ವಿಧಿಲಿಖಿತವು ?

ಮೊದಲು ನಿನ್ನನು ನೋಡಿದೊಡನೆ ಅಂಕುರಿಸಿತೀ
ನವಭಾವಗಳ ಮೊಳಕೆ ನನ್ನೆದೆಯಲಿ.
ಅಂದು ಬಾಯ್ದೆರೆಯಿತೆನ್ನೆದೆಯ ಕತ್ತಲೊಳವಿತು
ಮೇಲೆ ತೋರದ ಪ್ರೇಮಮಂಜೂಷವು.

ನಾನು ನಂಬದ ಕಾರ್ಯವಂದು ನಡೆಯಿತು, ನನ್ನ
ಜೀವನದ ಬಗೆಯಂದೆ ಹೊಸದಾಯಿತು.
ಪ್ರಥಮದರ್ಶನದೊಳೇ ಪ್ರೇಮವುಕ್ಕುವ ತೆರನ-
ನಂದು ಮನಗಾಣಿಸಿದ ಗುರುವು ನೀನು.

ಹಿಂದೆ ಜನ್ಮಾಂತರದ ಸಂಜೆಗೆಂಪಿನ ಕೆಳೆಯಲಿ
ಮೊಳೆತ ಪ್ರೇಮದ ಮುಗುಳೆ ಈ ಹುಟ್ಟನೆಳಹಗಲಲಿ
ಮೊದಲ ನೋಟದ ಭಾನುಕರದ ಸೋಕಿಗೆ ಬಿರಿಯಿತು!—
ಹೃದಯದ ಪವಾಡವಿದು ಬರಿದೆ ಘಟಿಸುವುದದೆಂತು !

ಹೊಲ ಕಾಯುವ ಚದುರೆ

ಅರೆಗಳಿಗೆಯಾದರೂ ಮರೆಯಾಗಲಿಲ್ಲಿಂದ
ನನ್ನ ಚಿತ್ತದ ಹೊಲವ ಕಾವ ಚದುರೆ;
ಎರಗಬಹುದನ್ಯಚಿಂತೆಗಳ ಗಿಳಿವಿಂಡೆಂದು
ಬೇಲಿಯಿಂದಾಚೆ ದೂರಕೆ ಸರಿಯಳು;
ನೆನಸೊ ಕನಸೋ ಕಣಸೊ—ಮನಸದೆಂತಿದ್ದರೂ
ಅದರೊಡತಿಯಿವಳ ಕಾವಲು ಸಡಿಲದು:
ಒನಪಿನಿಂದಡಿಯಿಡುತ, ಕಂಕಣವನಲುಗಿಸುತ,
ಮಿಂಚುನೋಟದ ಕವಣೆಯನು ಕೆದರುತ,
ಬಳಲುಮುಡಿಸಂಪಗೆಯ ಬಿರುಗಂಪನೆರಚುತ್ತ,
ಅಣಕನಗೆಯನು ತುಟಿಯೊಳಾಡಿಸುತ್ತ,
ಸುಳಿವ ಹಕ್ಕಿಯನೆಲ್ಲ ದೂರದೊಳೆ ಬೆದರಟ್ಟೆ
ತನ್ನ ಹೊಲದೊಳಗಲೆಯುವಳು ಮೋಹನೆ-
ನನ್ನೊಳಿನ್ನೂ ಕನಿಕರಿಸದ ಕಠಿಣೆ !

ಹೂವಿನ ಸರ

ಒರಿಯ ಮನಸಿನಲ್ಲಿ ನಾನು
ತಿರುಗುತಿದ್ದೆ ಕೋಣೆಯೊಳಗೆ.
ನೆರೆಯಿತಿರುಳು; ನಿದ್ದೆ ಬರುವ
ಗಳಿಗೆಯೊಂದಿಗೆ
ಹೊರಗಿನಿಂದ ಬಳೆಯ ಸದ್ದು
ಸುಳಿದು ಬಂದಿತು.

ಯಾರು ಬಂದರೆಂದು ನೋಡ-
ಲೋರೆಗಣ್ಣು ಹರಿಯಿತತ್ತ :
ಹಾರಿತೆದೆಯು, ಮೈಯ ಪುಳಕ
ಜುಮ್ಮೆನೆದ್ದಿತು;
ದೊರಕೊಡನೆ ಜಾರಿತಾಗ
ಸುಮ್ಮನಲಸಿಕೆ.

ಬಂದ ಹೆಣ್ಣು ನನ್ನ ಮಡದಿ—
ಅಂದಿಗೆರಡು ತಿಂಗಳಿಲ್ಲ
ನಿಂದು ಹಸೆಯಲವಳ ಕೈಯ
ನಾನು ಹಿಡಿದುದು;
ಒಂದು ಮಾತನಾಡಿ ಇಲ್ಲ
ನಾನು ಅವಳಲಿ.

ಬಾಗಿಲಲ್ಲಿ ಬಾಲೆ ತಡೆದು,
ಹೋಗಿಬರುವರುಂಟೆ ಎನುತ

ಹಾಗೆ ಒಂದು ಬಾರಿ ತನ್ನ
ಕತ್ತನೊಲೆದಳು;
ಬೇಗ ಕೈಯನೊಳಗೆ ನೀಡಿ
ಇತ್ತ ಸರಿದಳು.

ಬೆಳಕು ಕಡಮೆ ಕೋಣೆಯಲ್ಲಿ;
ತಿಳಿಯದವಳ ಕೈಯಲೇನೊ;
ತಿಳಿಯಿತೊಂದು ಮಾತ್ರ ನನಗೆ—
ಅವಳ ಪ್ರೇಮವು :
ಬೆಳೆದ ಲಜ್ಜೆಮುಸುಕನುಳಿದ
ಸವಿಯ ಭಾವವು.

ನನ್ನ ಬುದ್ಧಿಯರಿವ ಮೊದಲೆ
ನನ್ನ ಸೇರೆಯವಳ ಬಳಿಗೆ
ಮುನ್ನ ಹರಿದುಹೋಯಿತೊಡನೆ
ಕುಸಿದುಬಿದ್ದಿತು
ಚೆನ್ನೆಯೊಲಿದು ಪೋಣಿಸಿದ್ದ
ಕುಸುಮಮಾಲಿಕೆ.

ದಿಟ್ಟೆ ಹುಡುಗಿ ಎನುವಿರೇನೊ ?—
ಎಷ್ಟು ಕಷ್ಟದಿಂದ ಸರವ
ಗಟ್ಟಿಮನಸು ಮಾಡಿ ನನ್ನ
ಬಳಿಗೆ ತಂದಳೊ !
ಪುಟ್ಟ ಮೈಯೊಳೆಷ್ಟು ಒಲವೊ
ಅಳೆಯಬಲ್ಲೆನೆ !

ಒಂದು ಮಾತನಾಡಲಿಲ್ಲ,
ಒಂದು ನಿಮಿಷ ನಿಲ್ಲಲಿಲ್ಲ.
ಬಂದ ಮಿಂಚು ಮರಳಿತಿಷ್ಟೆ
ಸಾಕು ಪ್ರೇಮಕೆ.
ಹೊಂದಿ ಹೃದಯವೆರಡು ತಿಳಿಯ-
ಲೇಕೆ ನುಡಿಗಳು ?

ಪಶ್ಚಾತ್ತಾಪ

ಮರುಹಗಲು ತೆರಳುವೆನು ನಾನೆಂದು ತಿಳಿದು
ಹಿರಿಯರೆದುರಿಗೆ ಬೀಳುಕೊಳುವುದಕೆ ನಾಚಿ
ನನ್ನೆಡೆಗೆ ರಾತ್ರಿಯಲಿ ಹೆರರರಿಯದಂತೆ
ಚೆನ್ನೆ ನವವಧುವಂದು ಶಂಕಿಸುತ ಬಂದು,
“ ಅಡಿಗೆರಗಿ ಹೋಗುವೆನು ” ಎನುತ ನಿಟ್ಟುಸಿರು-
ಬಿಡಲು ಬೆಪ್ಪಾದಂತೆ ನಾನೇಕೆ ನಿಂತೆ ?
ಮಣಿದವಳ ಹಿಡಿದೆತ್ತಿ ಮುಂಗುರುಳ ತಿದ್ದಿ
ಅಣಿಯಾಗಿ ತುಟಿ ಕೆನ್ನೆ ಕಣ್ಣ ಮುತ್ತಿಟ್ಟು
ಸೆಳೆದಪ್ಪಿ ನಲ್ನುಡಿಯನೇಕಾಡಲಿಲ್ಲ ?
ಕುಲದ ಕಟ್ಟಳೆಗಂಜಿ ಮೋಸವಾಯ್ತಲ್ಲ !
ಆ ರೀತಿ ಮನ್ನಿಸಿದ ಕುಲದ ಕಟ್ಟಳೆಯೆ
ದೂರವಿರಿಸಿಹುದೀಗ ನಮ್ಮನಿಬ್ಬರನು !

ಪ್ರಶ್ನೆ—ಉತ್ತರ

ಹನ್ನೊಂದು ಹೊಡೆಯಿತು ; ಅಣ್ಣನ ಕೋಣೆಯು-
ಲಿನ್ನೂ ದೀವಿಗೆಯೇ ಆರಿಲ್ಲ.—ಇಂದೇಕೆ
ಮುನ್ನಿಲ್ಲದೋದ ಹಿಡಿದನು ?

ಚೆನ್ನೆ ತೌರೂರಿಗೆ ಹೋದಳು ; ಅವನಿಗೆ
ತನ್ನ ಮಂಚದಲಿ ಮನಸಿಲ್ಲ.—ಆದರಿಂದ
ಇನ್ನೂ ದೀವಿಗೆಯೇ ಆರಿಲ್ಲ !

ನೀಡು ಪಾಥೇಯುವನು

ಬಲುದಿನದ ಪಯಣಕ್ಕೆ ನಾ ತೆರಳಲಿರುವೆ:
ನಿಲುವ ಪಾಥೇಯುವನು ನೀಡೆನಗೆ ಚೆಲುವೆ,
ಹಸಿವಿನಲಿ ಕಾತರಿಸದಂತೆ ನನ್ನೊಲವೆ!

ಚಿಗರೆಗಣ್ಣನು ನನ್ನ ಮೊಗದತ್ತ ಹರಿಸು,
ಚಿಗುರುಬೆರಳಲಿ ಕೆನ್ನೆಗಳನು ನೇವರಿಸು,
ಸಕ್ಕರೆಯ ವಾಣಿಯಿಂದಕ್ಕರೆಯ ಸುರಿಸು.

ನೀನೆ ಮುಂಬರಿದು ಮುತ್ತನು ತುಟಿಗೆ ಸಲಿಸು,
'ನಾಲ್ಕು ಸಾಲದೆ? ಮತ್ತೆ ಕೋ!' ಎಂದು ನಲಿಸು,
ನನ್ನೆದೆಯ ತುಡಿತಗಳನಪ್ಪಪ್ಪಿ ನಿಲಿಸು.

ತಳಮಳಿಸೆ ನಾನು ವಿರಹದ ಭಯಕೆ ಸಂದು,
'ಆಗಾಗ ಕನಸಿನಲಿ ಕಾಣಲಹುದೆ'ಂದು
ನುಡಿ, ಕಂದುಮೋರೆಯಲಿ ನಸುನಗೆಯ ತಂದು.

ಎಂತೊ ಬೀಳ್ಕೊಂಡು, ಬೀದಿಯ ತಿರುವಿಗೇರಿ,
ಹೊಸಿಲ ಕಡೆ ಹೊರಳೆ ನನ್ನಕ್ಷಿ ಕೊನೆಬಾರಿ,
ಅದನು ಬಿಗಿಯಲಿ ನಿನ್ನ ದಿಟ್ಟೆ ಹನಿದೋರಿ.

—ಇಂತಿಂತು ಹದಗೊಳಿಸಿ ಬುತ್ತಿಯನು ಕಟ್ಟು
ಜೊತೆಗೆ ನೀನೇ ನೆನೆದ ಸವಿಯೊಂದನಿಟ್ಟು,
ನಿನ್ನ ರೂಢಿಯ ಲಜ್ಜೆಬಿಂಕವನು ಬಿಟ್ಟು.

ಸ್ಮೃತಿಯ ಹಸುಬೆಗೆ ತುಂಬಿ ರಾಗದಲಿ ಸುತ್ತಿ—
ಎದೆ ಹಸಿಯೆ ಬಗೆ ಬಯಸೆ, ಒಂದೊಂದನೆತ್ತಿ
ಸವಿದು ನಡೆವೆನು ವಿರಹಪಥದ ಮುಂದೊತ್ತಿ.

ನನ್ನಿಷ್ಟರುಚಿಯ ಬಗೆಯನು ನೀನು ಬಲ್ಲೆ :
ನೀಡು ಪಾಥೇಯವನ್ನು, ಕಾಲವನು ಗೆಲ್ಲೆ;
ಬಲುದಿನದ ಪಯಣಕ್ಕೆ ಹೊರಟಹೆನು ನಲ್ಲೆ!

ಹೊರಡುವಾಗ

ಹಿರಿಯರಿರುವರೆಂದು ನಾಚಿ ನುಡಿಯಲಾರದವಳ ಕೊರಗ್ಗು,
ತೆರೆದ ತುಟಿಯ ನಡುಕ, ಇನಿಸು ಬೆವತು ಕೆಂಪಗಾದ ಕೆನ್ನೆ,
ನೀರ ತೆರೆಯ ಹಿಂದೆ ಕಣ್ಣು ಬೀರುತಿರುವ ಬಯಕೆನೋಟ;
ಊರಿಗಿದನು ನೋಡಿ ನೋಡಿ ಹೊರಡಲಾರೆ, ನಿಲ್ಲಲಾರೆ!

ಅಗಲಿಕೆ

ಬೇಗ ಕೂಡುವೆವೆಂಬ ನೆಚ್ಚಿಕೆಯೂರೆಗೋಲನು ನೆಮ್ಮಿ ನಿಲ್ಲುತ
ಸಾಗಿಹೋದೀ ವರುಷವೊಂದನು ನಾವದೆಂತೋ ಕಳೆದೆವು.
ಕೊಚ್ಚಿಹೋಯಿತು ಕುಲದ ಕಟ್ಟಳೆಯೆಂಬ ಹೊನಲಿನ ಸೆಳವಿನೊಳಗೆ
ನೆಚ್ಚಿಕೆಯ ಹುಸಿಯೂರೆಗೋಲದು; ಬೆಳೆದುಹೋದುವು ದಿನಗಳು.
ಕೂಡುವಾ ಮಾತೇಕೆ? ನೋಡುವ ಭಾಗ್ಯವೇ ನಮಗಿಲ್ಲ!—ಬಿರುಹೊಳೆ
ಕಾಡುತಿರುವುದು ನಮ್ಮ ಇಬ್ಬರ ನಡುವೆ ಮೊರೆಯುತ ಸರಿಯುತ.

ಜೇಯುವನು ನಾನೊಬ್ಬನಾದರೆ ಮೆಟ್ಟುವೆನು ಬಿಗಿಹಿಡಿದು ಗೋಳನು,
ಹಾಯುವೆನು ಗಂಡೆದೆಯಲೆದುರಿಸಿ ದೀರ್ಘವಿರಹದ ಕಿಚ್ಚನು.
ಅಯ್ಯೊ, ತಾಳುವಳೆಂತು ಕೋಮಲೆ ಹಿಂಗದಾ ಹಂಬಲಿನ ನೋವನು?
ಕೊಯ್ಯುದಿಹುದೇ ಲಜ್ಜೆ ಕೊರಳನು, ಹೆರರಿಗುಸಿರುವೆನೆನ್ನಲು!
ಪಾಪಿ ನನ್ನೊಳದೇಕೆ ಲೋಕಕೆ ಮೀರಿದೊಲುಮೆಯನಿತ್ತೆ, ನಲ್ಲೆ?
ತಾಪದಲಿ ಕಂಗೆಡುವುದೊಂದೇ ಫಲವೆ ನಿನ್ನಾ ಪ್ರೇಮಕೆ!

ನಿರಾಶೆ

ನಲ್ಲೆ, ನಿನ್ನನು ಸೆಳೆದು ಬಾಚುತೀ ಭುಜಗಳಲಿ
ಬಿಗಿಯುವಾ ಭಾಗ್ಯವನು ಕೇಳೆ ನಾನೀಗ ;
ಗಲ್ಲವನು ಮೇಲೆತ್ತಿ ತುಟಿಯ ಸವಿಯನು ಹೀರಿ
ನಗುವ ಕಣ್ಣನು ಚುಂಬಿಸಲು ಕೋರೆನೀಗ ;
ಚೆಲ್ಲಾಟವೂ ಬೇಡ ನಿನ್ನ ಜೊತೆಯಲಿ; ಎರಡು
ನುಡಿಯನೂ ನಿನ್ನೊಡನೆ, ಕೊನೆಗೆ, ನಾನೊಲ್ಲೆ.
ಬಲ್ಲೆ: ನಿಲುಕದು ನನ್ನ ಸುಕೃತಕೀ ಸಿರಿಯೆಲ್ಲ;
ತಡೆಯಲೊಪ್ಪುವೆ ದೂರಕೇರುವಾಸೆಯನು.
ಸುಡುವುದಯ್ಯೋ ನನ್ನನೀ ಚಿಂತೆಯೊಂದೆ :
ಮುಖವೊಂದನಾದರೂ ನಾನೊಮ್ಮೆ ನೋಡಿ
ಸುಖಿಯಾಗಲೆಳಸಿದೆನು, ಪಾಪಿ ಕಣ್ಣಿನಲಿ ;—
ಕಡೆಗಿಷ್ಟು ಕರುಣವೂ ವಿಧಿಗಿಲ್ಲವಾಯ್ತೆ!

ಬಿಸಿಲುಕುದುರೆ

ಬಾಯಾರಿ ಹಂಬಲಿಸಿ ಮುಂದುವರಿಯುತಲಿಹನು
ಕೊನೆಯೆ ಕಾಣದ ಮರಳುಗಾಡಿನಲ್ಲಿ.
ಬೇಗ ದೊರೆಯುವ ತೆರದೊಳೆದುರಿನಲಿ ಮಿಂಚುವುದು,
ಕೆರಳಿಸುವುದಾಸೆಯನು ಬಿಸಿಲುಕುದುರೆ.
ತವಕದಲಿ ಸಾರುವನು; ಒಡನೆ ಹಿಂಜರಿಯುವುದು,
ಅಣಕಿಸುತ ಸರಿಯುವುದು ಬಲು ದೂರಕೆ—
ಕಾಲಚಕ್ರದ ಮರಳುಗಾಡಿನೊಳಗಣಕಿಸುತ
ಕಾಂತಾಸಮಾಗಮದ ಬಿಸಿಲುಕುದುರೆ !

ಸಖ—ದೂತಿ

ಒಲುಮೆಕುಲುಮೆಯಲಿಕ್ಕಿ ಮದನನು ಬಯಕೆಕೆಂಡವನುರುಹಲು,
ಏನು ಸುಕೃತಿಯೊ ಪ್ರಣಯಿ : ಗುಟ್ಟನು ಪಾಲುಗೊಳ್ಳುವ ಸಖನನು,
ಪ್ರೇಯಸಿಗೆ ಸಂದೇಶವೊಯ್ಯುವ ದೂತಿಯನು ಪಡೆದಾತನು !—
ನನ್ನ ಕವನವೆ ನನಗೆ ಸಖನೇ, ನನ್ನ ಸುಯ್ಯಲೆ ದೂತಿಯೇ !

ಹಿಡಿದ ವ್ರತ

ಬಾಲೆಯೊಬ್ಬಳು ಶಯನವೇರಿ
ಕುಳಿತು ಕಾಯುತಲಿರುವಳು ;
ಕೇಳಬಂದಿತು ಠಂಣಠಂಣನೆ
ಹತ್ತು ಘಂಟೆಯ ನಾದವು.

ಒಡನೆ ಗಾಂಭೀರ್ಯವನು ತಳೆದಳು ;
ಹೂಡಿ ಪದ್ಮಾಸನವನು
ಮಡಿಲ ಮರೆಯೊಳಗಿಂದ ತೆಗೆದಳು
ಭಾವಚಿತ್ರವನೊಂದನು.

ಅದರ ಮೇಲೆಯೆ ನಟ್ಟುಹೋಯಿತು
ಪ್ರೇಮಭಕ್ತಿಯ ನೋಟವು.
ಹೃದಯಕಪ್ಪುವಳೊಮ್ಮೆ, ಮೆಲ್ಲನೆ
ತೆಗೆದು ತುಟಿ ಸೋಕಿಸುವಳು.

ಅಗಲಿ ದೂರದಲಿದ್ದ ನಾಥನ
ನೆನಪು ತುಂಬಿತು ಮನದಲಿ ;
ಅಗಲಿದಾ ದಿನ ತಾವು ಇಬ್ಬರು
ಹಿಡಿದ ವ್ರತವನು ನೆನೆದಳು :

“ ಇಲ್ಲಿ ಹೊಡೆದೀ ಹತ್ತು ಘಂಟೆಯೆ
ಅಲ್ಲಿಯೂ ದನಿಗೈಯುತ,
ನಲ್ಲನಲ್ಲೆಯರಿಬ್ಬರಾತ್ಮವ-
ನೊಂದುಗೂಡಿಸುತಿರುವುದು.

“ ಸೇರಿ ಮನದಲಿ, ಶಾಂತಿಗೊಳ್ಳಲು,
ಗಳಿಗೆಯೊಂದನು ದಿನದಲಿ
ಘೋರವಿರಹದ ಹಿಡಿತದಿಂದ
ಕಸಿದುಕೊಳ್ಳುತಲಿರುವೆವು.

“ ಈಗ ಕುಳಿತಿಹನಲ್ಲಿ ನೆನೆಯಲು,
ಈಗ ಸುಯ್ಯುತಲಿರುವನು ;
ಈಗ ಚಿತ್ರವನಪ್ಪುತಿರುವನು,
ಈಗ ಕಂಬನಿಗರೆವನು ! ”

* * *

ಏನು ಬಲ್ಲಳು ಬಾಲೆ : ನಲ್ಲನ
ಪ್ರೇಮ ಬತ್ತಿದ ಬಗೆಯನು ?
ತಾನು ಸಲಿಸುವ ಭಕ್ತಿಯೆಲ್ಲಾ
ಮಣ್ಣುಗೂಡುವ ಬಗೆಯನು?

ಈಗ ಯಾರನು ನೆನೆಯುತಿರುವನೊ,
ಯಾರ ಚಿತ್ರಕೆ ಮಣಿವನೊ,
ಈಗ ಯಾರಪ್ಪಿಗೆಯಲಿರುವನೊ,—
ನಗರಮಾಯೆಯೆ ಬಲ್ಲಳು !

ದೂರದೂರಲಿ ಕಾದು ಕಂದಿದ
ಸತಿಯ ಹಂಬಲೆ ತೊರೆಯಿತು;
ಜಾರಿದಾ ದಿನಗಳಲಿ ಹಿಡಿದಾ
ವ್ರತದ ಹೆಸರೇನುಳಿವುದೆ !

ಅವಳ ಸುಖವನು ತೊಡೆದೆ, ದ್ರೋಹಿ!—
ಕೆಲವು ದಿನ ಹಿಂದಿರುಗದೆ
ಅವಳ ಹುಸಿನೆಚ್ಚಿಕೆಯನಾದರು
ಉಳಿಸು: ಕನಸನೆ ಸವಿಯಲಿ!

ಉಪೇಕ್ಷಿತೆ

ಚಿನ್ನದೆಳೆ, ಡಾಬು, ಬಳೆ, ಮಣಿಯೋಲೆಯೇಕೆ ?
ಸರಿಗೆಗುಪ್ಪಸವೇಕೆ, ಹಿರಿ ದುಗುಲವೇಕೆ ?—
    ನಿನ್ನ ಸಿರಿಯಿದನೆಲ್ಲ ಮೈತುಂಬ ಮೆರಸಿ
    ಲೋಕಕೆ ಪ್ರದರ್ಶಿಸುವ ಪ್ರತಿಮೆಯೊಂದೆನಿಸಿ,
ನಿನ್ನೊಲವೆ ಸೋಕದೀ ನನ್ನ ಬದುಕೇಕೆ ?

ಸುಳಿಸು ಕಣ್ಣಿನಲೊಮ್ಮೆ

ಸುಳಿಸು ಕಣ್ಣಿನಲೊಮ್ಮೆ
        ನಗೆಮಿಂಚ ನಲ್ಲೆ !
ಒಲುಮೆ ಒಳಗಿರಲೇನು ;
ತುಳುಕದಿರೆ ನೋಟದಲಿ
        ಬಗೆ ನೆಚ್ಚದಲ್ಲೆ !
ಮೊಗದ ಬಿಂಕದ ಮುಸುಕ-
        ನರೆನಿಮಿಷ ಸರಿಸು ;
ಬಿಗಿದ ತುಟಿಯನು ಬಿಚ್ಚಿ
        ಕಿರುನಗೆಯ ಹರಿಸು ;
ಕೆನ್ನೆ ನಸುಗೆಂಪೇರಿ
ಕಣ್ಣಿನಾಳದೊಳೊಮ್ಮೆ
        ಒಲವುಕ್ಕಿ ಬರಲಿ ;—
ನನ್ನ ದುಗುಡದ ಮನಕೆ
        ನಲವನದು ತರಲಿ !

ನೇತ್ರನಟಿಯರು

ಜೀವಸರ್ವಮೋಹನೆಯೆ, ನೇತ್ರನಟಿಯರನು ನೀ-
ನೆನಿತು ಬಗೆ ನೃತ್ಯದಲಿ ಪಳಗಿಸಿರುವೆ !—
ಮುಗುಳು ನಸುಬಿರಿದಂತೆ, ಹಾವು ಹೆಡೆತೆರೆದಂತೆ,
ತೊರೆಯೊಳಗೆ ಮರಿಮೀನು ಹೊಳಕಿ ಕೆಲಕೊಲೆದಂತೆ,
ಸಂಜೆ ವಿದ್ಯುದ್ದೀಪಕೋಶದಲಿ ಕುಡಿಮಿಂಚು
ಮೂಡಿ ಕಿರಣವನೆರಚಿ ಥಳಥಳಿಸಿ ಹೊಳೆದಂತೆ,
ಆವುದೊ ಪ್ರಮಾದದಿಂದದು ಥಟ್ಟನಳಿದಂತೆ,
ಕದದ ಮರೆಯಲಿ ಹಸುಳೆ ಇಣಿಕಿಣಿಕಿ ನಿಂತಂತೆ,
ಸನ್ನೆಯಲಿ ಕೆಣಕಿ ಬಳಿಕೋಡಿ ಅಣಕಿಸಿದಂತೆ,
ಜನದ ಸುಳಿವಿಗೆ ಬೆಚ್ಚಿ ಜಿಂಕೆ ಧಿಂಕಿಟ್ಟಂತೆ,
ಕೂರಂಬು ಹಾಯ್ದಂತೆ, ಖಡ್ಗ ಝಳಪಿಸಿದಂತೆ,
ಬೆಳಕಳಿದ ಕಾರಿರುಳ ಶೂನ್ಯಮುಂದಿರದಂತೆ—
ಎನಿತು ಬಗೆ ಭಂಗಿಯಲಿ ನರ್ತಿಸುವರು,
ಎನಿತು ಬಗೆ ಭಾವವನು ಚಿಮ್ಮಿಸುವರು !
ಇವರ ಲೀಲಾಲಾಸ್ಯದಲಿ ನೆಲೆಯ ಕಾಣದೆಯೆ
ನನ್ನ ಮತಿ ಬೆಗಡಾಗಿ ತೊಳಲುತಿಹುದು.
ಸಾಕು ಸಾಕೀ ಚದುರು ; ಮೊದಲೊನಪಿಗೇ ಸೋತು
ಕಾಣಿಕೆಗೆ ಹೃದಯವನೆ ತೆತ್ತಿರುವೆನು !
ಹಿಮಗಿರಿಯ ನೀರ್ಗಲ್ಲು ದ್ರವಿಸಿ ಹೊಳೆಹರಿವಂತೆ
ನಿನ್ನ ಕಂಗಳು ಕರಗಿ ಒಲುಮೆಬೆಳಕೊಳು ಮಿನುಗಿ
ನಿಲುವ ಚೆಲುವೊಂದನೇ ಬೇಡುತಿಹೆನು.
—ನಲ್ಲೆ, ಕರುಣಿಸು ನನಗೆ ನೋಟವಿದನು,
ಒಲ್ಲೆ ನಟ್ಯಕೆ ಮಿಕ್ಕ ವಿಭ್ರಮವನು !

ಸಂಶಯ

ಹವಣನರಿಯದ ನನ್ನ ಪ್ರಣಯಕ್ಕೆ ಬೇಸತ್ತು
ತಾಳಲಾರದೆ ನನ್ನ ಪ್ರೇಮಭಾರವನು
ಅವಿತುಕೊಳ್ಳುವೆಯೇನು ? ನನ್ನ ಕೆಳೆ ರೋಸಿದರೆ
ಹೇಳಲೊಲ್ಲೆಯದೇಕೆ ನನಗೆ ಸತ್ಯವನು ?
ಒಂದೊಂದು ಸಲ ಬಂದು ಸವಿಯ ನಗೆಯನು ಬೀರಿ
ಸಂದೇಹವೆಲ್ಲವನು ಮರಸಿ ನಂಬಿಸಿ ನಡೆವೆ ;
ಗೋಳನೊಡ್ಡುವೆ ತಿರುಗಿ ನೀನುಪೇಕ್ಷೆಯಲಿ.
ದಿಟವನರಿತರೆ ನನ್ನ ಹೃದಯ ಬಿರಿಯುವುದೆಂದು
ತಟವಟದ ಕೇಳಿಯನು ನನ್ನೊಳಾಡುವೆಯ !

ಒಲುಮೆ ಹಿಂದಿರುಗುವುದು ಪೂರ್ವಪುಣ್ಯದ ಮಾತು ;
ನಿಂದಿಸೆನು ಪ್ರೇಮವನು ನೀನೆರೆಯದಿರಲು.
ಬಲಿತ ಬೇರನು ಕಡಿದು ಸುಡುವೆ ನನ್ನಾಸೆಯನು—
ಒಂದೆ ಬಾರಿಗೆ ಮುಗಿವುದದರ ಕಥೆಯೆಲ್ಲ !
ಒಮ್ಮೆ ನಂಬಿಕೆ, ಈಗ, ಮರುಗಳಿಗೆಯಲೆ ಶಂಕೆ,
ನೆಮ್ಮದಿಯ ಹೆಸರುಂಟೆ ? ನಿಮಿಷನಿಮಿಷಕೆ ಹೊರಳಿ
ಕಂಡಿಹೋಯಿತು ಮನಸು ; ಮತಿ ವಿಕಲವಾಯ್ತು.
ಸಂಶಯದ ನರಕದಲಿ ನನ್ನನೇಕುರುಳಿಸಿದೆ ?
ಹಿಂಸೆಯಿದಕಿಂತಲೂ ಮರಣವೇ ಲೇಸು !

ಒಲವೋ ಹಗೆಯೋ

ಮಿಕ್ಕವರಲಿ ನಗೆಗೂಡುತ ಬೆರೆವೆ,
ನನ್ನೊಂದಿಗೆ ಬರಿಗೋಳನೆ ಕರೆವೆ ;
ಒಲವೋ ಹಗೆಯೋ—ಯಾವುದಿದು ?

ಹೆರರೇನೆನ್ನಲಿ, ಕೇಳುತ ನಲಿವೆ,
ಸರಸವನಾಡಲು ನನ್ನಲಿ ಮುನಿವೆ ;
ಒಲವೋ ಹಗೆಯೋ—ಯಾವುದಿದು ?

ಕುಳಿತರೆ ನಿಂತರೆ ಹುಳುಕನೆ ಬಗೆವೆ,
ತುಸು ತಪ್ಪಾದರು ಕಲಹವ ತೆಗೆವೆ ;
ಒಲವೋ ಹಗೆಯೋ—ಯಾವುದಿದು ?

ಪ್ರಣಯವ ಬೀರಲು, ಕಪಟವಿದೆನುವೆ,
ಸುಮ್ಮನೆ ಸಾರಲು, ಒಲವಿಲ್ಲೆನುವೆ ;
ಒಲವೋ ಹಗೆಯೋ—ಯಾವುದಿದು ?

—ದೂರಿದೆನಲ್ಲವೆ ನಿನ್ನನು ಹೆಚ್ಚು ?
ನನಗಾದರೊ, ಈ ಹಗೆಯೂ ಮೆಚ್ಚು !
ಒಲವೋ ಹುಚ್ಚೋ—ಯಾವುದಿದು !

ಸಮಾಧಾನ

ಕಣ್ಣುಮರೆಯಾದೊಡನೆ ಕಳವಳಿಸಿ ತವಕದಲಿ
ನನ್ನನರಸುತಲಿದ್ದೆ ಹಿಂದೆ ನೀನು.
ನನ್ನ ಜೊತೆಯಲಿ ಸೇರಿ ಸಲ್ಲಾಪಗಳಲಂದು
ಹೊತ್ತು ಮೀರಿದುದನೇ ತಿಳಿಯದಿದ್ದೆ.
ನನ್ನ ದುಃಖಗಳಲ್ಲಿ ಮನಗರಗಿ ನೀನತ್ತೆ ;
ನನ್ನ ಸಿರಿಯಲಿ ಹಿಗ್ಗಿ ನೀನು ಮೆರೆದೆ.
ನಮ್ಮ ದೇಹಗಳೆರಡು ಚೈತನ್ಯವೊಂದೆಂಬ
ಮಾತು ದಿಟವೆಂಬಂತೆ ನೀನು ನಡೆದೆ.
ಎಲ್ಲಿ ಹೋಯಿತು ನಿನ್ನ ಹಿಂದಿನಾ ಪ್ರೇಮವೆಲ್ಲ ?
ನನ್ನಿರವನೇ ಮರೆತು ಹೇಗೆ ನೀನಿರುವೆ ಇಂದು ?
ಅಂದು ಧಗಧಗನುರಿದು ನನ್ನ ಬಾಳನು ಬೆಳಗಿದ
ಜ್ವಾಲೆ ಕುಗ್ಗುತ ಹೀಗೆ ತಣ್ಣಗಿಂದಾರಿತೇಕೆ ?

ನನ್ನೊಲವಿನಲಿ ಕುಂದು ಕಾಣಬಂದಿತೆ ನಿನಗೆ ;
ನಿನ್ನ ಪ್ರೇಮದ ಸಮಕೆ ಬರಲಿಲ್ಲವೆ ?
ನಿನ್ನನೆಂದಾದರೂ ಧಿಕ್ಕರಿಸಿ ನುಡಿದೆನೇ ?
ನನ್ನ ನಡೆ ನಿನಗೊಪ್ಪಲಿಲ್ಲವೇನು ?
ಕಣ್ಣ ನೋಟಕೆ ಮೊದಲು ಸವಿಯೆನಿಸಿ ತೋರಿದೀ
ರೂಪದಲಿ ದೋಷವೆಡೆಗೊಂಡಿತೇನು ?
ನನ್ನೊಡನೆ ಪರಿಚಯವು ಹೆಚ್ಚಿಬಂದಂತೆಲ್ಲ
ನನ್ನ ಕೆಳೆಯಲಿ ಬಯಕೆ ಕುಗ್ಗಿತೇಕೆ ?
ಕಾರಣಗಳಿಲ್ಲದೆಯೆ ಮೇಲಕುಕ್ಕಿದ ಪ್ರೇಮವು
ಕಾರಣಗಳಿಲ್ಲದೆಯೆ ಸುಮ್ಮನೆಯೆ ಬತ್ತಬೇಕೆ ?
ಕಳೆದ ಜನ್ಮಗಳಿಂದ ಬೆಳೆದ ಸಂಬಂಧವೆಂದು
ನಾನು ನಂಬಿರಲದೇ ನಿಮಿಷದಲಿ ಬಯಲಾಯಿತೆ !

ಹಿಂದೆ, ಮೊದಲಲಿ ನಾನು ನನ್ನ ಗುಟ್ಟಿಲ್ಲವನು,
ಹೃದಯದಲಿ ಬಚ್ಚಿಟ್ಟ ನನ್ನೊಲವನು
ತಡೆಯಲಾರದೆ ಬಿಚ್ಚಿ ನಿನಗೆ ಹೇಳಿದ ದಿನದ
ನೆನಪು ನನಗಿರುವಂತೆ ನಿನಗಿರುವುದೆ ?
ನನ್ನ ಮಾತನು ಕೇಳಿ, ಹುಚ್ಚು ಮಾತನು ಕೇಳಿ
ಸುಮ್ಮನೇತಕೆ ನೀನು ನಡೆಯಲಿಲ್ಲ ?
ನನ್ನಂತೆಯೇ ನಿನ್ನ ಹೃದಯದಲಿ ಪ್ರೇಮಾಗ್ನಿ-
ಯುರಿವ ವಾರ್ತೆಯನೆಲ್ಲ ನುಡಿದೆಯೇಕೆ ?
ನನ್ನೆದೆಯೊಳೊಂದರೊಳೆ ಒಲುಮೆಯಂಕುರಿಸಿದ್ದರೆ—
ಆಸೆಗಳು, ಜೀವವನೆ ಕುಣಿಸಿದಾ ಉಲ್ಲಸಗಳು
ಉಕ್ಕಲೆಡೆಯಿರಲಿಲ್ಲ ; ದಿಟ. ಅಲ್ಲೆ ತಡೆದಿದ್ದರೆ
ಇಂದು ಕರುಳಿರಿಯುವೀ ಅಳಲಿಗೂ ದಾರಿಯಿಲ್ಲ.

ಎಲ್ಲಿಂದಲೋ ಒಲವು ಬಂದು ಮನಸನು ಹೊಗಲು
ಯಾರು ತಡೆಯುವರದರ ಪ್ರೇರಣೆಯನು !
ಫಲವಿಹುದೆ, ನಲವಿಹುದೆ, ಒಲವು ಪಡಿಮೂಡಿಹುದೆ
ಎನ್ನುವಾಲೋಚನೆಯೆ ಜನಿಸದಂತೆ
ಮರುಳಾಗಿ ಮೈಮರೆತು ದೂರದಿಂದಲೆ ತನ್ನ
ಪ್ರಿಯಜನಕೆ ಪ್ರೇಮವನು ಸಲಿಸಬಹುದು.
ಬಿರಿದುದೇ ಸಾಕೆಂದು ಹೂವು ನಲಿಯದೆ ? ಮತ್ತೆ
ದೇವರಡಿಯಲಿ ಬೇಡುವುದೆ ವರವನು !
ಈ ಬಗೆಯ ಕಥೆಯೆಷ್ಟೊ ಧರಣಿಯಲಿ ನಡೆದಿರುವುದು;
ನನ್ನೊಲುಮೆಯೊಂದರೊಳೆ ಜೀವ ತಣಿದಿದ್ದಿತಂದು.
ಬೂದಿ ಮುಸುಕಿದ ಸಣ್ಣ ಕೆಂಡದುರಿ ಕಾಣದಂತೆ
ಆಸೆಗೂಡದೆ ನನ್ನ ಮನದೊಲವು ಮಲಗಿದ್ದಿತು.

ನಾನು ನುಡಿದಂತೆಯೇ, ನನ್ನೊಲವಿನಂತೆಯೇ
ನಿನ್ನ ಪ್ರೇಮದ ಬಗೆಯನೊರೆದೆ ನನಗೆ.
ಆ ಗಳಿಗೆ ಮರೆಯುವುದೆ, ಆ ನುಡಿಗಳಳಿಯುವುವೆ
ನನ್ನ ಮೈಯಲಿ ಪ್ರಾಣವಿರುವ ವರೆಗೆ !
ಎಲ್ಲಿ ಹೋಗುವೆನೆಂಬ ತಿಳಿವಿಲ್ಲದೆಯೆ ನಡೆವ
ಕುರುಡನಿಗೆ ಕಣ್ಣುಗಳು ಬಂದುವಾಗ.
ತಡೆದಿದ್ದ ನಮ್ಮೊಲವು ಹರಿದು ಥಟ್ಟನೆ ಕೂಡಿ
ಮಿಂಚುಗಿಡಿಯನು ಸುರಿಸಿದಂತಾಯಿತು.
ಊಹೆಯನು ಮೀರಿರುವ, ಕೊರತೆಯೇ ಇಲ್ಲದಿರುವ
ಹೊಸ ಸೃಷ್ಟಿಯೊಂದರಲಿ ನಾನಿರುವೆನೆಂದು ಬಗೆದೆ.—
ಅಯ್ಯೊ, ಮಳಲೊಟ್ಟನಲಿ ಪುಟ್ಟ ಮಕ್ಕಳು ಕಟ್ಟುವ
ಮನೆಯಂತೆ ನಿಮಿಷದಲಿ ಕುಸಿವುದೆಂದರಿಯಲಿಲ್ಲ !

ನನ್ನ ಬಾಳಿನ ಮಾರ್ಗದಲಿ ನೀನು ಸುಳಿದಾಡಿ
ಮತ್ತೇತಕೋ ಹೊರಳಿ ದೂರವಾದೆ.
ಎಂತು ಮೊದಲಿನ ನಿನ್ನ ಹಿರಿಯೊಲವು ಮಸುಳಿಸಿತೊ,
ದಿಟವಾಗಿ ಹೇಳುವೆನು, ನಾನರಿಯೆನು.
ನಿನ್ನ ನೆನಪನು ನಾನು ತೊರೆಯುವುದಕೆಳಸುವೆನು:
ಬುದ್ಧಿ ಹೇಳುವ ಮಾತನೆದೆ ಕೇಳದು !
ನಿನ್ನೊಲವಿನಲಿ ಹಿಂದೆ ಪಡೆದ ಸವಿಯನೆ ನೆನೆದು
ನನ್ನ ಹೃದಯವು ಕೊರಗಿ ಕರಗಿರುವುದು.
ಒಂದೊಂದು ಸಲ ವಿರಹದಳಲಿನಲಿ, ಬದುಕಿದೆಲ್ಲ
ಬರಿಯ ದುಃಖವೆ ಹೊರತು ಸುಖವಿಲ್ಲವಿಲ್ಲವೆಂದು
ತೋರುವುದು ; ತನ್ನಾಸೆಯಿಂತೊಡೆದು ಹುಡಿಗೂಡಲು
ಜೀವಿಸುವುದಿನ್ನೇತಕೆಂದು ಕೇಳುವುದು ಮನಸು !

ನಿನ್ನನೇತಕೆ ಮತ್ತೆ ದೂರುವೆನು ನಾನಿಂತು,
ನಿನ್ನ ತಪ್ಪೇನಿಲ್ಲಿ, ನನ್ನದೇನು ?
ಕೋರಿದರೆ ಬಾರದೀ ಒಲುಮೆ, ನಿಲ್ಲದು ಬಳಿಕ
ತಾನು ಹೋಗುವ ಕಾಲವೊದಗಿದ್ದರೆ.
ಸಾಕು ನನ್ನನುಭವವೆ: ನಿನ್ನಿಂದ ಪ್ರೇಮವೇ-
ನೆಂಬುದನು ತಿಳಿದುದೇ ಸಿರಿಯಲ್ಲವೆ ?
ಬಂದ ಶೋಕವು ಬರಲಿ; ಕೀಳಲು ಗುಲಾಬಿಯನು
ಮುಳ್ಳು ಚುಚ್ಚುವುದೆಂದು ಹೆದರಬಹುದೆ !
ನಿನಗೆ ನಾನರ್ಪಿಸಿದ ಬಗೆಯ ಪ್ರೇಮವೆ ಮೊಳೆಯುದೆ
ದಿನದಿನವು ಲೋಕದಲಿ ಹುಟ್ಟಿ ಸಾಯುವರು ಜನರು.
ದೇವಮಾಯೆಯ ತೆರೆಯ ಲಿಣಿಕಿ ನೋಡಿದೆನು ನಾನು;
ಸಾಕು ನನಗಿದೆ : ಮತ್ತೆ ಕೊರಗುವುದು ಹುಚ್ಚುತನವು!

ಏಕೆ ನಲುಗಿತು

ಏಕೆ ನಲುಗಿತು ನಮ್ಮ ಪ್ರೇಮವು,
ಇಂತು ವಿಗಡಿಸಿಕೊಂಡಿತು ?
ಯಾರ ಕಣ್ಣೆಸರಾಯಿತು !

ಅಗಲಿಕೆಯ ಬೇಗೆಯನು ಸಹಿಸದೆ
ತಿರುಗಿ ಕೂಡಲು ತವಕಗೊಳುವೆವು ;
ಕಂಡಕೂಡಲೆ,—ಮುನಿವೆವು,
ಕಾದಿ ಕಂಬನಿ ಸುರಿವೆವು.
ಹೃದಯದಲಿ, ನಾವರಿಯದಂತೆ
ಎಲ್ಲೊ, ವಿರಸತೆಯೆಂಬ ಬಿರುಸು
ಅವಿತುಕೊಂಡೇ ಇರುವುದು ;
ನಾವು ಸೇರಲು ಸಿಡಿವುದು.

ನಾವು ಇಬ್ಬರೆ ಪ್ರಣಯಗೊಳ್ಳಲು
ಹೆರರ ಜೊತೆಯನು ತೊರೆವೆವು ;
ಬೆಳೆದ ಹೆಬ್ಬಯಕೆಯಲಿ ಸುಖವನು
ಸವಿಯಲೋಸುಗ ಬೆರೆವೆವು.
ಹೀನಭಾಗ್ಯವಿದೇನು ನಮ್ಮದು ?—
ಸುಖದ ಸುಳಿವನೆ ಕಾಣೆವು.
ಕಲಹವಿಲ್ಲದ ದಿವಸವೆಲ್ಲಿ ?
ತಪ್ಪನೆಣಿಸದ ಸರಸವೆಲ್ಲಿ ?
ಎಲ್ಲಿ ಪ್ರಣಯವಿನೋದವು !
ಒಬ್ಬರೊಬ್ಬರನರಿಯಲೆಂದೇ
ಬಂದಿತೇನೀ ಪ್ರೇಮವು ?

ಕಷ್ಟದಲಿ ನೆರವಾಗಲೆಳಸುತ
ಅಳಲನಿನ್ನೂ ಹದಿವೆವು.
ಹಿತದ ಮಾತನು ಹೇಳಲೆಳಸುತ
ಎದೆಯ ಹುಣ್ಣನು ತೆರೆವೆವು.
ಬೆಸೆವುದಿಬ್ಬರ ಬಾಳನೆನ್ನುತ
ನಾವು ಕಟ್ಟಿದ ಪ್ರೇಮಪಾಶವೆ
ನಮ್ಮ ಕೊರಳನು ಬಿಗಿಯಿತು,
ನೆಮ್ಮದಿಗೆ ಉರಲಾಯಿತು.
ಯಾವ ಪಾಪವೊ, ಯಾರ ಶಾಪವೊ—
ಪ್ರೇಮವೀ ಬಗೆಯಾಯಿತು !

ನಮ್ಮ ಕೆಳೆಯನು ಸಹಿಸಲಾರದೆ
ಕ್ರೂರವಿಧಿ ಗೋಳಿತ್ತನು,
ಬಿತ್ತಿದನು ಸಂಶಯವನು.
ಇದುವರೆಗೆ ನಾವವನಸೂಯೆಗೆ
ಕೊಟ್ಟ ಬಲಿಯೇ ಸಾಲದೆ ?
ಪ್ರೇಮವನು ಪಡೆದುದಕೆ, ದುಃಖದ
ತೆರಿಗೆ ತೆತ್ತುದು ಸಾಲದೆ ?—
ಬಾರ, ನಾವಿನ್ನೊಂದುಗೂಡುವ,
ಮತ್ತೆ ಒಮ್ಮನಸಾಗುವ,
ಸಂಶಯವ ಕಿತ್ತೊಗೆಯುವ,
ವಿಧಿಯ ವಂಚಿಸಿ ನಲಿಯುವ !

ತನಗೆ

ಸುಮ್ಮನೇಕೆ ಕೊರಗುತಿರುವೆ, ಕಣ್ಣ ನೀರನೇಕೆ ಮಿಡಿವೆ?
ಒಮ್ಮೆ ಒಮ್ಮೆ, 'ಪ್ರಿಯನ ಮನಸು ಕಠಿನ'ವೆಂದುಕೊಳುವೆಯೇಕೆ?
ಬರಿಯ ಸುಖದ ಕ್ರೀಡೆ ಪ್ರೇಮವೆನುತ ನೀನು ಬಗೆದೆಯೇನು ?
ಇರಿತಗಳನು ತಾಳದವರಿಗಿದರ ಗೊಡವೆಯೇತಕೆ ?

ಅವನು ನಲಿವನೆಂದು ನೆಚ್ಚಿ ನಿನ್ನ ಸೇವೆಯನ್ನು ಗೈದೆ ;
ತವಕದಾಸೆಯಿಂದ ಫಲವು ಬರುವ ಗಳಿಗೆಯನ್ನೆ ಕಾದೆ.—
ದೊರೆವುದೆಂದೆ ನಂಬಿ ಹೃದಯವೆದುರುಗೊಳಲು ತುಡಿದು ಬಂದೆ
ಸಿರಿಯೆ ವಿಧಿಯ ಮೊದಲ ತುತ್ತು ಎಂದು ತಿಳಿಯಲಿಲ್ಲವೆ !

ಭುಜದ ಹವಣು ಮೀರಿತೆಂಬ ತೆರದಲಿಂದು ನೀನು ದುಡಿದೆ ;
ನಿಜದ ಪ್ರೇಮವೊಪ್ಪಿ ತಂದ ಕಾಣಿಕೆಯನು ಸಲಿಸಿಬಿಟ್ಟೆ.
ಕಳೆಯಿತಿನ್ನು ನಿನ್ನ ಭಾರ : ಕೊಡುವುದೊಂದೆ ನಿನ್ನ ಕೆಲಸ.
ತಿಳಿದ ದಾರಿಯಲ್ಲಿ ನಡೆದೆ.—ಮಿಕ್ಕ ಚಿಂತೆಯೇತಕೆ ?

ಪ್ರಿಯನು ಮೆಚ್ಚಲಿಲ್ಲವೇನು ? ನೋಡಿ ನುಡಿಸಲಿಲ್ಲವೇನು ?
ಬಯಸಿ ಬಯಸಿ ನೀನು ತೋರಿದೊಲವನರಿಯಲಿಲ್ಲವೇನು ?—
ಮರುಳು ಮನಸೆ, ಕೇಳಿದಾಗ ಮೆಚ್ಚುನುಡಿಯ ಬಡ್ಡಿ ನಿನಗೆ
ದೊರೆಯುವುದಕೆ ಪ್ರೇಮವೇನು ಹಳೆಯ ಸಾಲವಾಯಿತೆ !

'ಕೊಟ್ಟೆ ನಾನು' ಎಂಬ ಗರ್ವವೇಕೆ ನಿನಗೆ ; 'ನನ್ನ ಪ್ರಿಯನು
ಮುಟ್ಟಿ ನೋಡಿ ನಲಿದು ಹೊಗಳಲಿಲ್ಲ'ವೆಂಬ ದುಃಖವೇಕೆ ?
ಒಲುಮೆಹುಚ್ಚು ಹಿಡಿದ ಮೇಲೆ ತನ್ನ ಬಾಳಿನೆಣಿಕೆಯುಂಟೆ !
ಒಲಿವುದೊಂದೆ ತನಗೆ ಗೊತ್ತು : ಬೇರೆ ಬಿಂಕವುಳಿವುದೆ ?

ನೋಡು, ಬಳಿಯ ದಾಸನೊಲಿದು ತಂದು ಕೈಯಲಿಟ್ಟ ಹೂವು
ಬೇಡವಾಗಲದನು ದಣಿಯು ಮೂಸಿ ಮುಡಿಯದೆಸೆದುಬಿಡಲು,—
ಶೋಕವೇಕೆ, ತಾಪವೇಕೆ? 'ಸೇವೆಗೈದೆನೆಂಬ ನೆನಪೆ
ಸಾಕು' ಎನದೆ ದಾಸನಳಲಿ ಕುದಿಯಬಹುದೆ ಸುಮ್ಮನೆ!

ನಡೆದ ಸಂಗತಿ

ಕುಳಿತು ಮಂಚದ ಮೇಲೆ, ಪ್ರೇಮದಲಿ ಕಾಮದಲಿ
ತರುಣ ರಮಣನು ಬಯಕೆನೋಟಗಳನು
ಸುಳಿಸುತಿರುವನು ನಾಚಿ ಹದುಗಿರುವ ಸತಿಯೆಡೆಗೆ,
ನೆರೆದ ಹೊಸ ಜವ್ವನದ ನಲ್ಲೆಯೆಡೆಗೆ.

ಅವಳ ತಗ್ಗಿದ ಮುಖವು, ನೆಲಕೆ ನಾಟಿದ ಕಣ್ಣು
ಇನಿಯನಿಂಗಿತವರಿಯಲಂಜುತಿರಲು,
ಅವಳ ಮುಡಿಮಲ್ಲಿಗೆಯ ತನಿಗಂಪು ಹರಿಹಾಯ್ದು
ರಮಣನೆದೆಯಲಿ ಸೊಕ್ಕನುರಿಗೊಳಿಸಿತು.

ಅಂದೆ ಪತಿಪತ್ನಿಯರ ಮೊದಲೊಸಗೆ.—ತರುಣನಿಗೆ
ಪ್ರೇಮಫಲವನು ಸೂರೆಗೊಳುವ ತವಕ;
ಹಿಂದೆಲ್ಲ ಮನಸಿನಲಿ ನೆನೆದ ಸುಖಸರಸವನು
ಇಂದು ಸತಿಯೊಡನಾಡಿ ತಣಿವ ತವಕ.

ಹತ್ತಿರಕೆ ನಲ್ಲೆಯನು ಸೆಳೆದು ಮೊಗದಿರುಹಿಸಲು
ಬಲದ ತೋಳೊತ್ತಿದನು ಕೊರಳ ಮೇಲೆ;
ಒತ್ತಿದನು,—"ಹಾ!" ಎಂದು ಚೀರಿ ಕೈಯನು ಕಿತ್ತು
ಹಾಸಿಗೆಯ ಮೇಲುರುಳಿ ಮೈಮರೆತನು.

ಹಸುರುಗಟ್ಟಿತು ತೋಳು.—ಸತಿಯ ಕೂಗನು ಕೇಳಿ
ಬಂದ ಜನವರಸಿದರು ಕಾರಣವನು:
ಹೊಸ ಮುಡಿದ ಮಲ್ಲಿಗೆಯ ದಂಡೆಯೊಳಗಡಗಿದ್ದ
ಕಿರುಸೂಜಿಯುದ್ದದೆಳನಾಗರವನು.

ಅಯ್ಯೊ, ಮಡದಿಯ ಜಡೆಯೆ ಮೃತ್ಯುಪಾಶವದಾಯ್ತು,
ಒಸಗೆಮಂಚವೆ ಮರಣಶಯನವಾಯ್ತು !
ಅಯ್ಯೊ, ಸತಿಯೊಲುಮೆಯನು ಸವಿವೊಂದು ತವಕವೇ
ಯಮಪುರಕೆ ಪಯಣಿಸುವ ತವಕವಾಯ್ತು !

ಒಂದು ಸಲವಾದರೂ ತುಟಿಗೆ ಮುತ್ತಿಡಲಿಲ್ಲ,
ಸೆಳೆದಪ್ಪಿ ಚೆಲುವೆಯನು ನಲಿಯಲಿಲ್ಲ!—
ಬೆಂದು ಮರುಭೂಮಿಯಲಿ, ಕಂಡು ಸೋಕಿದ ಜಲವೆ
ದಾಹವಣಗುವ ಮೊದಲೆ ವಿಷವಾಯಿತೆ !

ಒಲಿದೆನೇಕೆ

ಒಲಿದನೇಕೆ ನಲಿದೆನೇಕೆ ?

ನಿನ್ನನಂದು ಕಂಡೆನೇಕೆ
ನನ್ನ ಕೈಯ ಹಿಡಿದೆಯೇಕೆ
ಇಚ್ಛೆ ಲಭಿಸಿತೆಂದೆನೇಕೆ
ಹುಚ್ಚನಂತೆ ಕುಣಿದೆನೇಕೆ ?

ಮನೆಗೆ ಬಂದೆ ಮನಕೆ ಬಂದೆ
ನೆನೆದ ಹಲವು ಸೊಗಸ ತಂದೆ
ಇರುಳುಹಗಲು ನನ್ನನಿಲ್ಲಿ
ಕೊರಗಲುಳಿಸಿ ದಿವಕೆ ಸಂದೆ !

ನಿನಗೆ ನಾನದೇತಕೊಲಿದೆ
ಮನದ ಬೇಗೆ ಹೆಚ್ಚುವುದಕೆ
ಎರಡು ದಿವಸ ನನ್ನ ನಲಿಸಿ
ಮರುಳುಗೊಳಿಸಿ ನಡೆದೆಯಲ್ಲ !

ಒಲಿದೆನೇಕೆ ಒಲಿದೆಯೇಕೆ ?

ಅಂಜಿಕೆ

ನನ್ನ ತೋಳಿನ ನಡುವೆ ಹೃದಯಕ್ಕೆ ಬಿಗಿದು
ತನ್ನ ತನುವನು ನನ್ನ ಕಾವಲಿಗೆ ಬಿಟ್ಟು,
ವಶಗೊಂಡ ನಿದ್ದೆಯಲಿ ನನ್ನ ಸಿರಿ ಸಂದು
ಹಸುಮಗುವಿನಂತೆ ಮೈಮರೆತು ಮಲಗಿರಲು,
ಬಿಗಿಯಪ್ಪಿ ನಿಧಿಯದನು ಕಾದಿರುವ ನನಗೆ
ಬಗೆಯೊಳೆಂತೋ ಘೋರಭಯವುದಿಸಿತೊಂದು:
“ ಇಲ್ಲಿಯೇ ಹೀಗೆಯೇ ಜೀವನವು ಮುಗಿದು
ನಲ್ಲನಳಿದರೆ— ! ” ಎಂದು ಎದೆ ಬೆಚ್ಚಿಹೋಯ್ತು.
ಒಡನೆ, ತುಟಿಯೊಳಗುಸಿರು ಹರಿವುದನು ಹಿಡಿದೆ ;
ತಡಹಿ ಮೈಯನು, ಬೆಚ್ಚಗಿರುವುದನು ತಿಳಿದೆ.
ಬದುಕಿಹನು, ಬದುಕಿಹನು ನನ್ನಿನಿಯನಿನ್ನೂ !
ಹೃದಯದಂಜಿಕೆ ಮಾತ್ರ ಕೊನೆಗಾಣಲಿಲ್ಲ :
ಮತ್ತೆ ದೃಢತರವಾಗಿ ನನ್ನ ಭಾಗ್ಯವನು
ಒತ್ತಿ ನನ್ನೆದೆಗಪ್ಪಿ ಬಚ್ಚಿಟ್ಟೆನಲ್ಲಿ !

ಪ್ರೇಮಭೈರವ

ಸುಡುವ ಬೆಂಕಿಗೆ ಕೈಯನೊಡ್ಡಿ
ಹುಡುಗ, ನಗುನಗುತಿರುವೆಯಲ್ಲ!
ತಡೆದು ನಿನ್ನನು ಬುದ್ಧಿಗಲಿಸುವ-
ರಿಲ್ಲವೇನೈ ಹಿತವರು ?

ಚೆನ್ನೆಯೊಬ್ಬಳ ಕಣ್ಣ ಹೊಳಪಿನ
ಬಣ್ಣಬಣ್ಣಕೆ ಬೆರಗುಗೊಂಡು
ಚಿಣ್ಣ, ನೀನು ಪತಂಗದಂತೆ
ಹಾರಿ ನಲಿಯುತಲಿರುವೆಯೊ!

ಅವಳು ಒಲಿದಳು, ನೀನು ಒಲಿದೆ;
ಕವಲುಗೊಂಡಿತು ನಿಮ್ಮ ನಲವು.
ಸವೆಯದಮೃತವು ದೊರೆಯಿತೆಂದು
ಇಷ್ಟರಿಂದಲೆ ಬಗೆದೆಯೊ!

ನಿಮ್ಮ ಇಬ್ಬರ ಪ್ರೇಮಲತೆಯನೆ
ನಿಮ್ಮ ಕೊರಳಿಗೆ ಬೀರಿ ಬಿಗಿದು,
ನೆಮ್ಮದಿಯನುಡುಗಿಸುವ ಮಾರನ
ತಂತ್ರವನು ನೀನರಿಯೆಯೊ!—

ವಿರಹವೆನ್ನುವ ಬೇಗೆಯೆಬ್ಬಿಸಿ
ಉರಿಗೊಳಿಸಿ ಸಂತಪಿಸಿ ತನುವನು,
ಅರೆಯುವನು ಸೌಖ್ಯವನು ಕಾಮನು;
ಅಡಗಿಸುವನುಲ್ಲಸವನು.

ಒಳಗೆ ಸಂಶಯವೆಂಬ ಬೀಜವ
ಬೆಳೆಯಬಿಟ್ಟು ಮುಗಿಲ ಮುಟ್ಟಿಸಿ,
ಹಿಳಿದುಬಿಡುವನು ಶಾಂತಿರಸವನು;
ಸಾವೆ ಲೇಸೆನ್ನಿಸುವನು.

ಕಡೆಗೆ ಮೃತ್ಯುವನಿತ್ತ ಕಳುಹಿ
ಒಡೆದು ನಲ್ಲರ ಜೋಡಿಬಾಳನು,
ಕೆಡಹುವನು ತಳವಿಲ್ಲದಳಲಿನ
ಕೂಪದಲಿ ಉಳಿದವನನು.—

ಉರಿವ ಬೆಂಕಿಗೆ ಕೈಯನೊಡ್ಡಿ
ತರಳ, ತಿಳಿಯದೆ ನಗುವೆಯಲ್ಲ!
ಸರಸನೃತ್ಯವೆ ಪ್ರೇಮ?—ಭೀಷಣ
ಭೈರವನ ತಾಂಡವವದು!

ಅನುವಾದ

ಗಾಥಾಸಪ್ತಶತಿಯಿಂದ

೧

ಮಾವಿನ ಕುಡಿ ಕಾಣಲಿಲ್ಲವಿನ್ನೂ, ಅತ್ತೆ,
ಮಲಯಮಾರುತವಿನ್ನೂ ಸುಳಿಯಲಿಲ್ಲ ;
ಬಂದಿತು ಮಧುಮಾಸವೆಂದು ಸಾರುತಲಿದೆ
ಔತ್ಸುಕ್ಯವುಕ್ಕಿದ ಚಿತ್ತ ತಾನೆ. (೬-೪೨)

೨

ಇನ್ನೂ ಬಾಲಕನೆಮ್ಮ ಗೋಪಾಲನೆಂದೆಂದು
ಬಣ್ಣಿಸುತಿರಲು ಯಶೋದೆ,
ಕೃಷ್ಣನ ಮುಖವನು ನೋಡಿ ತಮ್ಮೊಳು ತಾವು
ನಗುವರು ವ್ರಜಯುವತಿಯರು. (೨-೧೨)

೩

ಇಳಿಹೊತ್ತಿನಲ್ಲಿ ಬಂದಳಿಯನ ಮೋಹದ
ತವಕವನಿಮ್ಮಡಿಸುವುದು
ಹಿತ್ತಿಲೊಳಗೆ ವಧು ಮೀಯುತಲಿಹಳೆಂದು
ಪಿಸುಗುಟ್ಟುವ ಬಳೆಯುಲುಹು. (೭-೮೩)

೪

ಎತ್ತಿ ಕಣ್ಣನು ಬೆರಳಗಲಿಸಿ ದಾರಿಗ-
ನೆಂತೆಂತು ನೀರೀಂಟುವನೊ ತಡೆದು
ಅರವಟ್ಟಿಗೆಯ ಬಾಲೆಯಂತಂತು ಬಿಡುವಳು
ಇನ್ನೂ ತೆಳ್ಳಗೆ ತೆಳುಧಾರೆಯನು. (೨-೬೧)

೫

ಅರೆಗಣ್ಣೊಳೀತಕೆ ನೋಡುವೆ? ಅದು ಬೇಡ,
ಸಹಜವಾಗಿಯೆ ದೃಷ್ಟಿಯಿರಿಸು.
ಆತನೂ ಚೆನ್ನಾಗಿ ಕಾಣಿಸುವನು, ಮತ್ತೆ
ಮುಗ್ಧೆಯೆಂದೆನಿಸುವೆ ನೀನೂ. (೩–೨೫)

೬

ಎದುರಾಗಿ ಹಾಯಿಸಿ ಮರಳಿಸಿ ಹೊರಳಿಸಿ
ನಲ್ಲೆ ಬೀರುವ ಕಣ್ಣ ಹೊಳಹುಗಳೆ
ಮದನನ ಬಾಣಗಳೆಮಗೆ; ಮಿಕ್ಕವರಿಗೆ
ಆವುವು ಬೇಕೋ ಅವೆ ಆಗಲಿ. (೩–೧೦)

೭

ಬಯಕೆಯೇನೇನವ್ವ ನಿನಗೆಂದು ಸಖಿಯರು
ಬೆಸಗೊಳೆ ಮುಗ್ಧೆಯನು,
ಚೊಚ್ಚಲ ಬಸಿರಿಯ ನೋಟವು ಸುಮ್ಮನೆ
ಸೇರಿತು ನಲ್ಲನನು. (೧–೧೫)

೮

ಬಡತನಕಿಳಿದ ಸಂಸಾರದಿ ಗಂಡನು
ವ್ಯಾಕುಲಗೊಳದಂತೆ ಮುಡದಿ
ಬಯಕೆಯೇನಿಹುದೆಂದು ಕೇಳಲು ಮತ್ತೊಮ್ಮೆ
ಉದಕವನೇ ಬೇಡುತಿಹಳು. (೫–೭೨)

ಅಡಿಗೆಯ ಕೆಲಸದಿ ಮಸಿ ಹತ್ತಿ ಕರೆಯಾದ
ಕೈಯಿಂದ ಮುಖವನು ಮಡದಿ
ಮುಟ್ಟಿಕೊಂಡಿರೆ ನೋಡಿ ನಗುವನು ಗಂಡನು
ಸಮನಾಯ್ತು ಚಂದ್ರನಿಗೆನುತ. (೧–೧೩)

೧೦

ಪ್ರಣಯಕೋಪದಿ ಕೂಡಿ ಹುಸಿನಿದ್ದೆಯನು ಮೌನ-
ಶಾಲಿಗಳಿಬ್ಬರೂ ಹೂಡಿ—
ಹಿಡಿದೊತ್ತಿ ತಡೆದಿಹ ಸುಯ್ಲನಾಲೈಸುವ
ಜೋಡಿಯೊಳಗೆ ಜಟ್ಟಿ ಯಾರು ? (೧–೨೭)

೧೧

ಬಿರಿಯುತಲಿದ್ದರೂ ಹೃದಯ ನಾನೆಂತುಟು
ಅರುಹುವೆನತ್ತೆ, ಆತನಿಗೆ—
ಕನ್ನಡಿಯಲಿ ಛಾಯೆಯೆಂತಂತು ದುಃಖವು
ತನ್ನಲಿ ಪಡಿಮೂಡದವಗೆ ? (೩–೪)

೧೨

ಕೃತ್ರಿಮವಲ್ಲದ ಪ್ರೇಮವಿಲ್ಲವೆ ಇಲ್ಲ,
ಅತ್ತೆ, ಮಾನುಷಲೋಕದೊಳಗೆ.
ಇದ್ದರೆ, ಬರುವುದದಾರಿಗೆ ವಿರಹವು ;
ವಿರಹವು ಬರಲಾರು ಬದುಕುವರು ? (೨–೨೪)

೧೩

ಎನಿತೊಲವನು ಕೊನೆತನಕ ಸಲ್ಲಿಸಬಲ್ಲೆ
 ಅನಿತನೆ ನೀಡು ನೀನೆನಗೆ.
ಬಂದ ಹಸಾದ ಹಿಂಗಿರುಗೆ ಸಂಕಟವನು
 ಸಹಿಸಲೆಲ್ಲರಿಗಿಲ್ಲ ಶಕ್ತಿ. (೧–೭೧)

೧೪

ಕಣ್ಣಾರ ಕಂಡಪರಾಧದ ಪ್ರೇಮದ
 ಭಿನ್ನವ ಬೆಸೆದು ಕೂಡಿಸಿರೆ,
ಕುದಿಸಿ ಮತ್ತಾರಿಸಿದುದಕದೊಳೆಂತಂತು
 ವಿರಸವಾಗುವುದೈಸೆ ರಸವು. (೧–೫೩)

೧೫

ಏನೇನು ಸೊಗಸದೊ ನಿನಗೆ ನಾನೆಸಗೆನು
 ಅದು ನನ್ನ ಕೈಯೊಳಗಿರಲು ;
ನಾನೇ ಸೊಗಸದೆಹೋಗಲು, ಎಲೆ ಚೆನ್ನ,
 ಅದು ನನ್ನ ಕೈಯೊಳಗಿಹುದೆ ? (೭–೧೫)

೧೬

ನಗೆಯಿಂದ ಮೂದಲೆ, ಮಿಗಿಲಿನಾದರದಿಂದ
 ಕೊರೆಯುವ ದುಮ್ಮಾನವು,
ಉಗುವ ಕಂಬನಿಯಿಂದ ಕಲಹವು—ಪದ್ಧತಿ-
 ಯಿದು ಕುಲಸತಿಯುರಲಿ. (೬–೧೩)

೧೭

ಕಾಣದಿರಲು ಜಾರುವುದು ಪ್ರೇಮ, ಬಲುಬಾರಿ
  ಕಾಣಲು ಕೂಡ ಜಾರುವುದು,
ಜಾರುವುದದು ಚಾಡಿಕಾರರ ನುಡಿಗೇಳಿ,
  ಹಾಗೆಯೆ ತಾನು ಜಾರುವುದು. (೧–೮೧)

೧೮

ಅಮೃತದ ಕಲಶವೆ ಗಗನದಾಭರಣವೆ
  ರಜನಿಯ ತಿಲಕವೆ ಓ ಇಂದುವೆ,
ಆವ ಕಿರಣಗಳಿಂದ ನಲ್ಲನ ಸೋಕಿಹೆ
  ಸೋಕಿಸೈ ನನಗೆ ನೀನವುಗಳನೆ. (೧–೧೭)

ಗ್ರೀಕಿನಿಂದ

೧

ಮುಳುಗಿದನು ಚಂದಿರನು, ಕೃತ್ತಿಕೆಯರಡಗಿದರು,
ಸರಿಹೊತ್ತು ಮಿಾರಿರುವುದಿರುಳಿನಲ್ಲಿ,
ಕಳೆದು ಹೋಗುತಲಿಹುದು ವೇಳೆ ; ನಾನೊಬ್ಬಳೇ
ಹೊರಳುವೆನು ಶಯನದಲ್ಲಿ !

—ಸಾಫೊ

೨

ತಾರೆಗಳ ನಿಟ್ಟಿಸುವೆ, ತಾರೆ ?—
ನಾನೆ ಆ ಬಾನಾಗೆನೇ :
ಕೋಟಿ ತಾರಗೆ ಕಣ್ಣು ತುಂಬ
ನಿಟ್ಟಿಸುವುದಕೆ ನಿನ್ನನೇ !

—ಪ್ಲೇಟೊ

ಕಣ್ಣು

ಇರುಳಿಗೆ ಸಾವಿರ ಕಣ್ಣುಗಳಿರುವುವು,
ಒಂದೇ ಹಗಲಿಗದು.
ಮರೆವಿಳೆಯಲಿ ಬೆಳಕಳಿವುದು ಮತ್ತೆ
ಕುಂದುವ ರವಿಯೊಡನೆ.

ಸಾವಿರ ಕಣ್ಣುಗಳಿರುವುವು ಮತಿಗೆ,
ಹೃದಯಕೆ ತಾನೊಂದೇ.
ಜೀವನದೆಲ್ಲಾ ಬೆಳಕಳಿಯುವುದು
ಎದೆಯೊಲವಳಿದಿರಲು.

—ಬೂರ್ಡಿಲನ್: *The night has a thousand eyes*

ಹೆಸರು

ಸುಖದ ದಿವಸವೊಂದರಲ್ಲಿ ನುಡಿದೆ ನನ್ನ ಚೆನ್ನೆಗಿಂತು :
ಬೆಸಸು, ನನ್ನ ಕವನದಲ್ಲಿ ನಿನ್ನ ಕರೆವ ಹೆಸರದೆಂತು—
ಕಾವ್ಯಗಳಲಿ ಮೆರೆವ ಯಾವ ಸವಿಯ ಹೆಸರದು ?
ಇಂದುಮತಿಯೆ, ಶಕುಂತಲೆಯೆ,
ಕಾದಂಬರಿಯೆ, ಯಶೋಧರೆಯೆ,
ಉಷೆಯೆ, ಉಮೆಯೆ, ರಮೆಯೆ— ಯಾವ ಹೆಸರನಿಡುವುದು ?

ಬಳಿಕ ನನ್ನ ಕೋಮಲಾಂಗಿಯಿತ್ತಳಿಂತು ಮಾರುನುಡಿಯ :
ಹೆಸರಿನೊಳಗೆ ಯಾವ ಭಾಗ್ಯವುಂಟು ? ಬರಿಯ ಬಯಲು, ಇನಿಯ—
ಹಾಡಿಗೊಪ್ಪುವಂತೆ ಜೋಡಿಸೊಂದು ಹೆಸರನು.
ಇಂದುಮತಿಯೊ, ಕಾದಂಬರಿಯೊ,
ಉಷೆಯೊ— ತಿಳಿದ ಹೆಸರ ಕರೆಯೊ ;
ಒಂದೆ ಒಂದು : ನಿನ್ನಳೆಂದು ಕರೆಯೊ ನನ್ನನು !

—ಕೋಲ್‌ರಿಜ್ : *I asked my fair one happy day*

ಇದೇ ಲೇಖಕರ

ಭಾರತೀಯ ಕಾವ್ಯಮೀಮಾಂಸೆ

ಪುಟಗಳು xxi + ೪೮೪

ಬೆಲೆ ೩-೮-೦ ; ೪-೦-೦

" . . . . . ಸುಸಮರ್ಥವೂ ಮಾರ್ಗದರ್ಶಕವೂ ಆಗಿರುವ ಒಂದು ಆಚಾರ್ಯ ಕೃತಿ . . . . . "

—ಪ್ರೊ. ಕೆ. ವಿ. ಪುಟ್ಟಪ್ಪನವರ
'ಮುನ್ನುಡಿ' ಯಿಂದ

ಕೆಲವು ಹೊಸ ಪ್ರಕಟನೆಗಳು

ಪ್ರೊ. ಎ. ಆರ್. ಕೃಷ್ಣಶಾಸ್ತ್ರೀ, ಎಂ. ಎ.

ವಚನ ಭಾರತ	೬	೮	೦
ಕಥಾಮೃತ	೭	೮	೦
ಭಾಸಕವಿ	೨	೮	೦

ಡಾ. ಕೆ. ಕೃಷ್ಣಮೂರ್ತಿ, ಎಂ.ಎ., ಬಿ.ಟಿ., ಪಿಎಚ್.ಡಿ.

ಕನ್ನಡ ಧ್ವನ್ಯಾಲೋಕ	೫	೦	೦

ವಿದ್ವಾನ್ ಎಚ್. ಗಂಗಾಧರಶಾಸ್ತ್ರೀ

ಅಮರು ಶತಕಮ್	೧	೮	೦

ಶ್ರೀ ಎಸ್. ವಿ. ಪರಮೇಶ್ವರಭಟ್ಟ, ಎಂ.ಎ.

ಪ್ರೇಮಾರಾಧನ	೨	೦	೦
ಕನ್ನಡ ಕುಮಾರಸಂಭವ	೨	೮	೦

ಶ್ರೀ ಕೆ. ಎಸ್. ನರಸಿಂಹಸ್ವಾಮಿ

ಉಂಗುರ	೧	೦	೦

ವಿವರಗಳಿಗೆ ಬರೆಯಿರಿ

ಎಚ್. ಎಂ. ಶಂಕರನಾರಾಯಣರಾವ್, ಎಂ. ಎ.

ಸಂಪಾದಕರು ಮತ್ತು ಪ್ರಕಾಶಕರು

ಶಾರದಾಮಂದಿರ

೫೭೮ ಕೃಷ್ಣರಾಜವನಂ, ಮೈಸೂರು